ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಗುವಾಹಟಿಯಲ್ಲಿ ಸೋಮವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ-20 ಟೂರ್ನಿಯ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್, ರಾಜಸ್ಥಾನ ರಾಯಲ್ಸ್ ವಿರುದ್ಧ 127 ರನ್‌ಗಳ ಸಾಧಾರಣ ಮೊತ್ತ ಕಲೆ ಹಾಕಿತ್ತು.

31 ಮಾರ್ಚ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 21 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಘಟನೆಗಳ ಪರಿವರ್ತನೆ ಮಾಡುತ್ತವೆ » 2

ವಸತಿ ರಹಿತ ಫಲಾನುಭವಿಗಳಿಗೆ ಮನೆಗಳ ವಿತರಣೆ » 3

ಬದುಕು ಬದಕಲು ಬಿಡು ಸಂದೇಶ ಪಾಲಿಸೋಣ » 4

# ಇರಾನ್ ಸಂಪನ್ಮೂಲ ಸ್ಫೋಟಿಸುವ ಎಚ್ಚರಿಕೆ

## ಹಾರ್ಮುಜ್ ಮುಕ್ತಗೊಳ್ಳದಿದ್ದರೆ ವಿದ್ಯುತ್ ಸ್ಥಾವರ, ತೈಲ ಬಾವಿ, ದ್ವೀಪ ನಾಶ | ಟ್ರಂಪ್ ಎಚ್ಚರಿಕೆ

• ಪ್ರಜೋದಯ ವರದಿ

**ನವದೆಹಲಿ:** ಬಂದ್ ಆಗಿರುವ ಹಾರ್ಮುಜ್ ಜಲಸಂಧಿಯನ್ನು ತಕ್ಷಣವೇ ವ್ಯವಹಾರಕ್ಕೆ ಮುಕ್ತಗೊಳಿಸದಿದ್ದರೆ ಇರಾನಿನ ಎಲ್ಲಾ ವಿದ್ಯುತ್ ಉತ್ಪಾದನಾ ಸ್ಥಾವರಗಳು, ತೈಲ ಬಾವಿಗಳು ಮತ್ತು ಖಾರ್ಗ್ ದ್ವೀಪಗಳನ್ನು ಸ್ಫೋಟಿಸಿ ಸಂಪೂರ್ಣವಾಗಿ ನಾಶಮಾಡುತ್ತೇವೆಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್ಚರಿಕೆ ನೀಡಿದ್ದಾರೆ.

ಟ್ರಂಪ್ ತಮ್ಮ ಟ್ರೂತ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ, ಇರಾನ್ ವಿರುದ್ಧ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು ಅಮೇರಿಕಾ ಆಡಳಿತ ಗಂಭೀರ ಚರ್ಚೆ ನಡೆಸುತ್ತಿದೆ. ಶೀಘ್ರದಲ್ಲೇ ಒಪ್ಪಂದಕ್ಕೆ ಬರದಿದ್ದರೆ ಇರಾನಿನ ಮೂಲ



ಸೌಕರ್ಯ ಘಟಕಗಳನ್ನೇ ನಾಶ ಮಾಡುವುದಾಗಿ ಗುಡುಗಿದ್ದಾರೆ.

ಇರಾನ್‌ನ ಹೊಸ ಮತ್ತು ಹೆಚ್ಚು ಉದಾರಿ ಆಡಳಿತದ ಜೊತೆ ಮಾತುಕತೆ ನಡೆಯುತ್ತಿದೆ. ಒಪ್ಪಂದ ಬಹಳ ಬೇಗ ನಡೆಯಬಹುದು. ಒಂದು ವೇಳೆ ಒಪ್ಪಂದ ಏರ್ಪಡಲು ಆಗದಿದ್ದರೆ ಮತ್ತು ಹಾರ್ಮುಜ್ ಜಲಸಂಧಿಯು ವ್ಯಾಪಾರಕ್ಕೆ ತಕ್ಷಣವೇ ತೆರೆಯದಿದ್ದರೆ, ನಾವು ಉದ್ದೇಶಪೂರ್ವಕವಾಗಿ ಮುಟ್ಟದೇ ಸುಮ್ಮನಿರುವ ಇರಾನ್‌ನ ಸಂಪನ್ಮೂಲವನ್ನು ಅಂತ್ಯಗೊಳಿಸುತ್ತೇವೆ. ಇರಾನಿನ 47 ವರ್ಷಗಳ ಭಯೋತ್ಪಾದನಾ ಆಡಳಿತದಿಂದ ನಮ್ಮ ಸೈನಿಕರು ಮತ್ತು ಇತರರು ಮೃತಪಟ್ಟದ್ದಕ್ಕೆ ನಾವು ನಡೆಸುವ ಪ್ರತೀಕಾರದ ದಾಳಿ ಇದು ಸಮರ್ಥಿಸಿಕೊಂಡಿದ್ದಾರೆ.

ಇರಾನ್ ಮೇಲೆ ಇಸ್ರೇಲ್ ಮತ್ತು ಅಮೇರಿಕಾ ಯುದ್ಧ ಆರಂಭಿಸಿ ಒಂದು ತಿಂಗಳ ಮೇಲಾಯಿತು. ಫೆಬ್ರವರಿ 28ರಂದು ಮೊದಲು ದಾಳಿಯಾಗಿದೆ. ಸಾವಿರಾರು ಕ್ಷಿಪಣಿಗಳು, ಡ್ರೋನ್‌ಗಳು ಸಾಕಷ್ಟು ಹಾನಿ ತಂದಿವೆ. ಇರಾನ್ ತೀವ್ರ ಪ್ರತಿರೋಧ ಒಡ್ಡುತ್ತಿದೆ. ಇಸ್ರೇಲ್ ಮೇಲೆ ವ್ಯಾಪಕ ವಾಯುದಾಳಿಗಳನ್ನು ಮಾಡಿದೆ. ಅಷ್ಟೇ ಅಲ್ಲ, ಸೌದಿ, ಯುಎಇ ಇತ್ಯಾದಿ ಗಲ್ಫ್ ರಾಷ್ಟ್ರಗಳಲ್ಲಿರುವ ಅಮೇರಿಕಾ ಮಿಲಿಟರಿ ನೆಲೆಗಳು ಹಾಗು ಇಂಧನ ಘಟಕಗಳ ಮೇಲೆ ಇರಾನ್ ದಾಳಿ ಮಾಡಿ ಹಾನಿಗೊಳಿಸಿದೆ.

ಇರಾನ್ ಮೇಲೆ ದಾಳಿ ಮಾಡಿದ ಉದ್ದೇಶ ಈಡೇರಿದೆ ಎಂದು ಟ್ರಂಪ್ ಹೇಳಿಕೊಳ್ಳುತ್ತಿದ್ದಾರೆ. ಯುದ್ಧದ ಆರಂಭದಲ್ಲೇ ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಖಮೆನೈ ಹಾಗು ಹಲವಾರು ಮುಖಂಡರನ್ನು ಇಸ್ರೇಲ್ ಮತ್ತು ಅಮೇರಿಕಾದ ಕಾರ್ಯಾಚರಣೆಯಲ್ಲಿ ಕೊಲ್ಲಲಾಗಿತ್ತು. ಈಗ ವಿಶ್ವದ ಶೇ.20ರಷ್ಟು ತೈಲ ಸಾಗಣೆಯಾಗುವ ಹಾರ್ಮುಜ್ ಜಲಸಂಧಿಯನ್ನು ಇರಾನ್ ಹಿಡಿತದಿಂದ ಮುಕ್ತಗೊಳಿಸುವುದು ಮತ್ತು ಇರಾನ್‌ನ ತೈಲ ಸಾಗಣೆಯ ಕೇಂದ್ರಬಿಂದುವಾಗಿರುವ ಖರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವುದು

» ನಾಲ್ಕನೇ ಪುಟದಲ್ಲಿ

### ಟ್ರಂಪ್ ಪ್ರಸ್ತಾವನೆ ತಿರಸ್ಕರಿಸಿದ ಇರಾನ್

**ಪೂರ್ವ ಏಷ್ಯಾ ಸಂಘರ್ಷ ಕೊನೆಗೊಳಿಸಲು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಿಟ್ಟಿದ್ದ 15 ಅಂಶಗಳ ಪ್ರಸ್ತಾವನೆಯನ್ನು ಇರಾನ್ ತಿರಸ್ಕರಿಸಿದೆ. ಸಂಧಾನ ಪ್ರಸ್ತಾವನೆಯನ್ನು ಅವಾಸ್ತವಿಕ, ಅಸಮಂಜಸ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೈ, ಕಿಡಿಕಾರಿ ದ್ದಾರೆ. ಇರಾನ್ ಮತ್ತು ಅಮೇರಿಕಾ ನಡುವೆ ಪ್ರಸ್ತುತ ಯಾವುದೇ ನೇರ ಮಾತುಕತೆಗಳು ನಡೆದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.**

# ಒಂದು ಲೋಡ್ ಮರದ ತುಂಡು ಸಂಗ್ರಹ: ಪರಿಶೀಲನೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ವ್ಯಕ್ತಿಯೊಬ್ಬರಿಗೆ ಸೇರಿದ ಗೋದಾಮಿನಲ್ಲಿ ಕಳೆದ ಒಂದು ವರ್ಷದಿಂದ ಒಂದು ಲೋಡ್ ಮರದ ತುಂಡುಗಳು ದಾಸ್ತಾನಿದ್ದು, ಅದು ಯಾವ ಮರ, ಯಾವ ಉದ್ದೇಶಕ್ಕೆ ಸಂಗ್ರಹಿಸಲಾಗಿದೆ ಎಂಬ ಸಂಶಯ ಹುಟ್ಟಿದೆ.

ಹೊರ ರಾಜ್ಯಗಳಿಗೆ ಕಳುಹಿಸಲು ಬೀದರ್ ಜಿಲ್ಲೆಯಿಂದ ಮರದ ವ್ಯಾಪಾರಿಯೊಬ್ಬ ಅಪರೂಪದ ಮರದ ತುಂಡುಗಳನ್ನು ತಂದಿಟ್ಟಿದ್ದಾರೆಂದು ತಿಳಿದು ಬಂದಿದೆ. ಅರ್ಷದ್ ಹುಸೇನ್ ಎಂಬುವವರ ಪಟ್ಟಣದ ಕೈಗಾರಿಕಾ ವಲಯದ ಕಿಂಗ್ಸ್ ಅಂಡ್ ಟ್ರೇಡರ್ಸ್ ಗೋದಾಮಿನಲ್ಲಿ ಸಂಗ್ರಹಿಸಿಡಲಾಗಿದೆ. ವೀಳ್ಯದೊಂದಿಗೆ ಸೇವಿಸುವ ಕಾಚು ಫಲದ ಮರದ ತುಂಡು ಇದಾಗಿದೆ. ಅದಕ್ಕೆ ಕಟೇಚು ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಅಂದಾಜು 25 ಟನ್‌ನಷ್ಟು ಮರ ಇದ್ದು, ಮರದ ತೊಗಟೆ ತೆಗೆದಾಗ ನೋಡಲು ರಕ್ತಚಂದನದಂತೆ ಭಾಸವಾಗುತ್ತದೆ. ಪೊಲೀಸರು ಹಾಗು

ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಕಗ್ಗಲಿ ಮರ ಸಾಗಾಟಕ್ಕೆ ಪರವಾನಗಿ ಪಡೆಯಲಾಗಿದೆ. ಆದರೆ ಕಾಚು ಮರ ಔಷಧಿಯುಕ್ತ ವಾಗಿದ್ದು, ಅದರ ಸಾಗಾಟಕ್ಕೆ ಪರವಾನಗಿ ಇಲ್ಲ ಎನ್ನಲಾಗುತ್ತಿದೆ. ಈ ಹಿಂದೆ ಉರುವಲು ಮರ ಎಂದು ಹೇಳಿಕೊಂಡು ಸಾಗಾಟ ನಡೆಸಲಾಗಿದೆ ಎಂಬ ಮಾಹಿತಿ ಇದೆ.

ವಲಯ ಅರಣ್ಯಾಧಿಕಾರಿ ಕುಮಾರಸ್ವಾಮಿ ಅವರು ಈ ಬಗ್ಗೆ ಪ್ರತಿಕ್ರಿಯಿಸಿ, ನಮ್ಮ ಇಲಾಖೆ ಈ ಹಿಂದೆ ಈ ಮರ ಸಾಗಾಣಿಕೆಗೆ ಯಾವುದೇ ಪರವಾನಗಿ ನೀಡಿಲ್ಲ. ಬೀದರ್ ಜಿಲ್ಲೆಯಿಂದ ಇಲ್ಲಿಗೆ ಪರವಾನಗಿ ಪಡೆದು ತರಲಾಗಿದೆ. ಪರಿಶೀಲಿಸಿ ಮೇಲಾಧಿಕಾರಿಗಳ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದರು.

# ಏ.3 ರಿಂದ 5ರ ವರೆಗೆ ಆದಿಹಳ್ಳಿ ಆದಿಲಕ್ಷ್ಮಿ ಅಮ್ಮ ಜಾತ್ರೆ

## 7 ಹಳ್ಳಿಗಳ ಗ್ರಾಮಸ್ಥರ ಸಮಾಗಮ | ಶಂಭುನಾಥ ಸ್ವಾಮೀಜಿ ಮಾಹಿತಿ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಗಂಡಸಿ ಹೋಬಳಿ ಆದಿಹಳ್ಳಿಯ ಶ್ರೀ ಆದಿ ಲಕ್ಷ್ಮಿ ಅಮ್ಮನವರ ಜಾತ್ರಾ ಮಹೋತ್ಸವ ಏ.3 ರಿಂದ 5ರ ವರೆಗೆ ನಡೆಯಲಿದೆ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಹೇಳಿದರು.



ಆದಿಹಳ್ಳಿ ಶಾಖಾ ಮಠದಲ್ಲಿ ಸೋಮವಾರ ಜಾತ್ರಾ ಸಿದ್ಧತೆ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆದಿಹಳ್ಳಿ ಸೇರಿ ಸುತ್ತಲಿನ ಏಳು ಹಳ್ಳಿಗಳ ಗ್ರಾಮಸ್ಥರು ಪೂರ್ವಿಕರ ಕಾಲದಿಂದ ಭಕ್ತಿ, ಶ್ರದ್ಧೆ ಮತ್ತು ನಂಬಿಕೆಯಿಂದ ಜಾತ್ರೆ ನಡೆಸಿಕೊಂಡು ಬಂದಿದ್ದಾರೆ. ಗಂಡಸಿ, ಬಾಗೇಶಪುರ ಹಾಗು ಸುತ್ತಲಿನ ಗ್ರಾಮಗಳ ಭಕ್ತರು ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಕ್ಷೇತ್ರದ ಜಾತ್ರೆ ಮುಗಿದ ಬಳಿಕವೇ ಅನೇಕ ಗ್ರಾಮಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭವಾಗುವ ಪರಂಪರೆ ಇದೆ ಎಂದರು.

ಏ.3ರಂದು ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ಅಂದು ಬೆಳಿಗ್ಗೆ ಪುಣ್ಯಾಹ, ರುದ್ರಾಭಿಷೇಕ, ವಿಶೇಷ ಪೂಜೆ ಸೇರಿ ಹಲವು ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ. ಬಳಿಕ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ಅದೇ ದಿನ ಸಂಜೆ ಗ್ರಾಮಸ್ಥರು ಸಂಪ್ರದಾಯದಂತೆ ಬಾಯಿಗೆ ಬೀಗ ಹಾಕಿಸಿಕೊಂಡು ಹರಕೆ ಸಲ್ಲಿಸುವ ವಿಶೇಷ ಆಚರಣೆ ನಡೆಯಲಿದ್ದು, ಇದು ಜಾತ್ರೆಯ ವಿಶಿಷ್ಟ ಆಕರ್ಷಣೆಯಾಗಿ ಗುರುತಿಸಿಕೊಂಡಿದೆ ಎಂದರು.

ಏ.4ರಂದು ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ ಕೆಂಡೋತ್ಸವ ನಡೆಯಲಿದ್ದು, ಭಕ್ತರ ನಂಬಿಕೆ ಮತ್ತು ಹರಕೆಯ ಪ್ರತೀಕವಾಗಿರುವ ಈ ಆಚರಣೆ ವಿಶೇಷ ಭಕ್ತಿಭಾವದಿಂದ ನೆರವೇರಲಿದೆ. ಸಂಪ್ರದಾಯದಂತೆ ಎಡೆ ಸೇವೆ ಕೂಡ ನಡೆಯಲಿದೆ. ದೇವಿಯ ಕಳಸವನ್ನು 8 ವರ್ಷದ ಒಳಗಿನ ಹೆಣ್ಣು ಮಗು ಹೊರುವ ಸಂಪ್ರದಾಯವಿದ್ದು ಕೆಂಡೋತ್ಸವದಲ್ಲಿ ಪಾಲ್ಗೊಳ್ಳುವುದು ದೇವಿಯ ಮಹಿಮೆಯಾಗಿದೆ ಎಂದರು.

**139ನೇ ಹುಣ್ಣಿಮೆ ಕಾರ್ಯಕ್ರಮ**

ಅದೇ ದಿನ ಸಂಜೆ 5 ಗಂಟೆಗೆ ಬ್ರಹ್ಮ ರಥೋತ್ಸವ ಜರುಗಲಿದ್ದು, ಭಕ್ತರು ದೇವಿಯ ದರ್ಶನಕ್ಕಾಗಿ ದೊಡ್ಡ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆ ಇದೆ. ಸಂಜೆ 6 ಗಂಟೆಗೆ ಧಾರ್ಮಿಕ ಸಮಾರಂಭ ಆಯೋಜಿಸಲ್ಪಟ್ಟಿದ್ದು,

» ನಾಲ್ಕನೇ ಪುಟದಲ್ಲಿ

# ಗ್ರಾ.ಪಂ. ಚುನಾವಣೆ ಮೂರ್ನಾಲ್ಕು ತಿಂಗಳು ಮುಂದಕ್ಕೆ

## ಕ್ಷೇತ್ರ ಮರು ವಿಂಗಡಣೆಗೆ ಕಾಲಾವಕಾಶ ಕೇಳಿದ ಸರ್ಕಾರ | ವಿಳಂಬ ಖಂಡಿಸಿ ಪಿಐಎಲ್, ಹೈಕೋರ್ಟ್‌ನಲ್ಲಿ ವಿಚಾರಣೆ

• ಪ್ರಜೋದಯ ವರದಿ

**ಹಾಸನ :** ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರಾವಧಿ ಮುಕ್ತಾಯಗೊಂಡು ಮೂರು ತಿಂಗಳು ಕಳೆದರೂ ಚುನಾವಣೆ ಸದ್ಯಕ್ಕೆ ನಡೆಯುವ ಯಾವುದೇ ಲಕ್ಷಣ ಕಾಣುತ್ತಿಲ್ಲ. ಚುನಾವಣೆ ಘೋಷಣೆಗೆ ಇನ್ನೂ ಮೂರ್ನಾಲ್ಕು ತಿಂಗಳ ಬೇಕಾಗಬಹುದು ಎನ್ನಲಾಗುತ್ತಿದೆ.

ಜನಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಕ್ಷೇತ್ರಗಳ ಮರು ವಿಂಗಡಣೆ ಮಾಡಲು ಕ್ಷೇತ್ರ ಮರುವಿಂಗಡಣಾ ಆಯೋಗ ಸೂಚನೆ ನೀಡಿರುವುದರಿಂದ ಆ ವರದಿಯನ್ನು ಸಿದ್ಧಪಡಿಸಲು ಜಿಲ್ಲಾಧಿಕಾರಿಗಳಿಗೆ ಇನ್ನೂ ನಾಲ್ಕು ವಾರಗಳ ಕಾಲಾವಕಾಶ ಬೇಕಿದ್ದು, ಮೀಸಲಾತಿ ಹಂಚಿಕೆಗೆ ಮತ್ತೆ ಮೂರು ತಿಂಗಳು ಕಾಲಾವಕಾಶ ಬೇಕಾಗಬಹುದೆಂದು ಸರ್ಕಾರ ಹೈಕೋರ್ಟ್‌ನಲ್ಲಿ ಮೌಖಿಕವಾಗಿ ತಿಳಿಸಿ, ಕಾಲಾವಕಾಶ ಕೇಳಿದೆ. ಹೀಗಾಗಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಬಂದ ಸ್ಥಿತಿ ಗ್ರಾಮ ಪಂಚಾಯಿತಿಗೂ ಒಂದೊದಗಿದೆ.



ಗ್ರಾಮ ಪಂಚಾಯಿತಿ ಚುನಾವಣೆ ವಿಳಂಬವಾಗುತ್ತಿರುವುದನ್ನು ಪ್ರಶ್ನಿಸಿ, ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡಲಾಗಿತ್ತು. ಈ ಬಗ್ಗೆ ಅರ್ಜಿ ವಿಚಾರಣೆ ನಡೆಸಿದ ವೇಳೆ ಸದ್ಯ ಚಾಲ್ತಿಯಲ್ಲಿರುವ ಹಿಂದಿನ ಜನಗಣತಿ ಅಧರಿಸಿ ಪ್ರತಿ ಗ್ರಾಮ ಪಂಚಾಯಿತಿಗೆ ಎಷ್ಟು ಸದಸ್ಯರು ಆಯ್ಕೆಯಾಗಬೇಕೆಂಬುದನ್ನು ಕರ್ನಾಟಕ ರಾಜ್ಯ ಕ್ಷೇತ್ರ ಮರು ವಿಂಗಡಣಾ ಆಯೋಗ ನಿರ್ಧರಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡ ಬೇಕು. ಅದರಂತೆ, ಅಗತ್ಯ ಅಂಕಿ- ಸಂಖ್ಯೆಗಳ ಮಾಹಿತಿಯನ್ನು 15 ದಿನಗಳಲ್ಲಿ ಆಯೋಗಕ್ಕೆ ಒದಗಿಸುವಂತೆ ಮಾ.18 ರಂದು ಕ್ಷೇತ್ರ ಮರು ವಿಂಗಡಣಾ ಆಯೋಗ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದೆ ಎಂದು ಸರ್ಕಾರ ಕೋರ್ಟ್‌ಗೆ ತಿಳಿಸಿದೆ.

ಜಿಲ್ಲಾಧಿಕಾರಿಗಳಿಂದ ಆಯೋಗಕ್ಕೆ ಮಾಹಿತಿ ಬರಲು ಎರಡು ವಾರಗಳು ಬೇಕು. ಆ ಮಾಹಿತಿ ಪರಿಶೀಲಿಸಿ, ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯೋಗಕ್ಕೆ ಒಂದು ವಾರ ಕಾಲಾವಕಾಶ ಬೇಕು. ಆಯೋಗದ ಶಿಫಾರಸು ಪರಿಶೀಲಿಸಿ ಒಟ್ಟು ಸದಸ್ಯರ ಸಂಖ್ಯೆ ನಿಗದಿಪಡಿಸಲು ಸರ್ಕಾರಕ್ಕೆ ಒಂದು ವಾರ ಕಾಲಾವಕಾಶ ಬೇಕು. ಸದಸ್ಯರ ಸಂಖ್ಯೆ ಅಂತಿಮಗೊಂಡ ಬಳಿಕ, ಮೀಸಲು ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ 3 ತಿಂಗಳು ಕಾಲಾವಕಾಶ ಬೇಕಾಗಬಹುದೆಂದು ಸರ್ಕಾರದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಮೌಖಿಕವಾಗಿ ತಿಳಿಸಿದ್ದಾರೆ. ಈ ಮಾಹಿತಿ ಆಲಿಸಿದ ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಏ.29ಕ್ಕೆ ಮುಂದೂಡಿದೆ.

**ಆಕಾಂಕ್ಷಿಗಳಲ್ಲಿ ಕುಗ್ಗಿದ ಉತ್ಸಾಹ**

ಜಿಲ್ಲೆಯ ಬಹುತೇಕ ಗ್ರಾಮ ಪಂಚಾಯಿತಿ ಚುನಾಯಿತ ಜನಪ್ರತಿನಿಧಿಗಳ ಅಧಿಕಾರಾವಧಿ ಫೆಬ್ರವರಿ 2ಕ್ಕೆ ಮುಕ್ತಾಯಗೊಂಡಿತ್ತು. ಇನ್ನು ಕೆಲವೇ ಕೆಲವು ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರಾವಧಿ ಏಪ್ರಿಲ್ ತಿಂಗಳಿಗೆ ಮುಕ್ತಾಯಗೊಳ್ಳಲಿದೆ. ಆದ್ದರಿಂದ ಗ್ರಾಮ ಪಂಚಾಯಿತಿ ಚುನಾವಣೆಗೆ ಪೂರ್ವ ಸಿದ್ಧತೆ ಕೈಗೊಳ್ಳುವಂತೆ ಸರ್ಕಾರ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿತ್ತು. ಈ ಬೆಳವಣಿಗೆಯಿಂದ ಉತ್ಸಾಹಗೊಂಡಿದ್ದ ಆಕಾಂಕ್ಷಿಗಳು ಪೂರ್ವ ತಯಾರಿಯಲ್ಲಿ ತೊಡಗಿಕೊಂಡಿದ್ದರು. ಇನ್ನೇನು ಚುನಾವಣೆ ಘೋಷಣೆಯಾಗುತ್ತದೆಂದು ಕಾಯುತ್ತಿದ್ದ ಗ್ರಾಮ ಪಂಚಾಯಿತಿ ಸ್ಪರ್ಧಾಕಾಂಕ್ಷಿಗಳಿಗೆ ಸದ್ಯಕ್ಕಿಲ್ಲ ಚುನಾವಣೆ ಎಂಬ ಮಾಹಿತಿ ಉತ್ಸಾಹವನ್ನು ಕುಗ್ಗಿಸಿದೆ.

**ಈ ವರೆಗಿನ ಬೆಳವಣಿಗೆ**

- ಜನವರಿ, ಫೆಬ್ರವರಿ ತಿಂಗಳಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರಾವಧಿ ಮುಕ್ತಾಯ
- ಜ.28-ಚುನಾವಣೆ ಸಿದ್ಧತೆ ಮಾಡಿಕೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರ ಸೂಚನೆ
- ಮಾ.18-ಜನಸಂಖ್ಯೆಗೆ ಅನುಗುಣವಾಗಿ ಸದಸ್ಯರ ಆಯ್ಕೆಗೆ ಕ್ಷೇತ್ರ ಮರುವಿಂಗಡಣಾ ವರದಿ ಸಲ್ಲಿಸಲು ಕ್ಷೇತ್ರ ಮರುವಿಂಗಡಣಾ ಆಯೋಗ ಜಿಲ್ಲಾಧಿಕಾರಿಗೆ ಪತ್ರ
- ಏ.29 ಚುನಾವಣೆ ವಿಳಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ಮುಂದೂಡಿಕೆ

### ಆಗಸ್ಟ್‌ನಲ್ಲಿ ಚುನಾವಣೆ ಸಾಧ್ಯತೆ

**ಪಿಐಎಲ್ ವಿಚಾರಣೆ ವೇಳೆ ಹೈಕೋರ್ಟ್‌ಗೆ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ತಿಳಿಸಿದ ಪ್ರಕಾರ ಎಲ್ಲಾ ಅಂದುಕೊಂಡಂತೆ ನಡೆದರೆ ಆಗಸ್ಟ್ ತಿಂಗಳಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಅಷ್ಟರೊಳಗೆ ಮತ್ತೇನಾದರೂ ತಾಂತ್ರಿಕ ಸಮಸ್ಯೆ ಎದುರಾದರೆ ಇನ್ನಷ್ಟು ದಿನಗಳ ಕಾಲ ಚುನಾವಣೆ ಮುಂದೂಡುವ ಸಾಧ್ಯತೆ ಇದೆ.**

# ಕುಲದೇವತೆ ಶ್ರೀ ಸಬ್ಬಮ್ಮ ದೇವಿ ಆಶೀರ್ವಾದ ಪಡೆದ ಸದಾನಂದಗೌಡ

• ಪ್ರಜೋದಯ ವರದಿ

**ಸಕಲೇಶಪುರ:** ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಅವರು ಸೋಮವಾರ ತಾಲ್ಲೂಕಿನ ವಣಗೂರಿನಲ್ಲಿರುವ ತಮ್ಮ ಕುಲದೈವದ ಮೂಲ ಸ್ಥಾನ ಶ್ರೀ ಸಬ್ಬಮ್ಮ ದೇವಿ ದೇವಾಲಯಕ್ಕೆ ಕುಟುಂಬ ಸಮೇತ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಕೇಂದ್ರದ ಸಚಿವರಾಗಿ, ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುವ ಅವರು ಮೂಲ ದೈವಕ್ಕೆ ಈ ವರೆಗೆ ಒಂದು ಬಾರಿಯೂ ಬಂದಿರಲಿಲ್ಲ. ಕುಲದೈವದ ಕುರಿತು ನಿಖರ ಮಾಹಿತಿ ದೊರೆತ ಹಿನ್ನಲೆಯಲ್ಲಿ ಹುಡುಕಿಕೊಂಡು ಬಂದು ದರ್ಶನ ಪಡೆದಿದ್ದಾರೆ. ಶಾಸಕ ಸಿಮೆಂಟ್ ಮಂಜು ಅವರು ಸದಾನಂದಗೌಡ ಅವರನ್ನು ಬರಮಾಡಿಕೊಂಡರು.

ಈ ವೇಳೆ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಕುಲದೇವರ ಭೇಟಿಗೆ ಯೋಗ ಇರಬೇಕು. ಭಕ್ತನಾಗಿ ನನ್ನನ್ನು ಮರೆತಿದ್ದೀಯಾ ಎಂದು ದೇವರು ನೆನಪು ಮಾಡಿಕೊಟ್ಟಿದೆ. ಅವ್ಯಕ್ತ ಶಕ್ತಿಯ ರೂಪವೇ ದೇವರು ಎಂದರು.

ಸಮಾಜದ ಚಿಂತನೆ ಮಾಡುವತ್ತ ಗಮನ ಹರಿಸಬೇಕೆಂದು ನಮ್ಮ ಪರಂಪರೆ ಹೇಳುತ್ತದೆ. ರಾಜ್ಯದ ಎಲ್ಲಾ ಜನರ ಸಹಕಾರದಿಂದ ಮುಖ್ಯಮಂತ್ರಿಯಾಗುವ ಸದಾವಕಾಶ ದೊರೆಯಿತು. ವಿ.ಎಸ್.ಆಚಾರ್ಯ ನನ್ನ ರಾಜಕೀಯ ಗುರು. ಅದೇ ರೀತಿ ಬಿ.ಬಿ. ಶಿವಪ್ಪ ಹಾಗು ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ ನಾನು

» ನಾಲ್ಕನೇ ಪುಟದಲ್ಲಿ

# ಇಂದು ಛಾಯಾಗ್ರಾಹಕರ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಬೆಟ್ಟದ ಭೈರವೇಶ್ವರ ದೇವಾಲಯ ಆವರಣದಲ್ಲಿ ಛಾಯಾಗ್ರಾಹಕರ ಮೇಲೆ ನಡೆದ ಹಲ್ಲೆ ಖಂಡಿಸಿ ಮಾ. 31ರಂದು ರಾಜ್ಯ ಛಾಯಾ ಗ್ರಾಹಕರ ಸಂಘ ನಗರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 11 ಗಂಟೆಗೆ ಹೇಮಾವತಿ ಪ್ರತಿಮೆಯಿಂದ ಮೆರವಣಿಗೆಯಲ್ಲಿ ಬರುವ ಪ್ರತಿಭಟನಾಕಾರರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸುವರು. ಮತ್ತೊಂದೆಡೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ದೇವಾಲಯಕ್ಕೆ ತೆರಳಿ ಘಟನೆ ಕುರಿತು ಪರಿಶೀಲನೆ ನಡೆಸಲಿದ್ದಾರೆ.

# ಪೆನ್ಸಿಲ್ ಕೋರೆ ಹೆಸರಿನ ಕಾಡಾನೆಯಿಂದ ದಾಂಧಲೆ

## ಮನೆ ಮುಂದೆ ನಿಲ್ಲಿಸಿದ್ದ ಆಟೋ ಜಖಂ: ಒಂಟಿ ಸಲಗನ ಆರ್ಭಟಕ್ಕೆ ಜನರಲ್ಲಿ ಆತಂಕ

• ಪ್ರಜೋದಯ ವರದಿ

**ಬೇಲೂರು:** ಗ್ರಾಮಕ್ಕೆ ನುಗ್ಗಿದ ಪೆನ್ಸಿಲ್ ಕೋರೆ ಹೆಸರಿನ ದೈತ್ಯ ಒಂಟಿ ಸಲಗ, ಮನೆ ಬಳಿ ನಿಲ್ಲಿಸಿದ್ದ ಆಟೋವನ್ನು ಸೊಂಡಿಲಲ್ಲಿ ಎತ್ತಿಹಾಕಿ ಜಖಂಗೊಳಿಸಿರುವ ಘಟನೆ ತಾಲ್ಲೂಕಿನ ಕುಪ್ಪಗೋಡು ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ ನಡೆದಿದೆ.

ಆಟೋ ಚಾಲಕ ಕೃಷ್ಣಪ್ಪ ಎಂಬುವವರು ಮನೆ ಮುಂದೆ ತಮ್ಮ ಆಟೋ ನಿಲ್ಲಿಸಿದ್ದರು. ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಏಕಾಏಕಿ ಮನೆ ಬಳಿಗೆ ಬಂದ ಕಾಡಾನೆಯನ್ನು ಕಂಡು



ಆತಂಕದಿಂದ ಓಡಿಸಲು, ಪಟಾಕಿ ಸಿಡಿಸಿದಾಗ ರೊಚ್ಚಿಗೆದ್ದ ಸಲಗ ಮನೆಯ ಮುಂದಿದ್ದ ಆಟೋ ಮೇಲೆ ದಾಳಿ ನಡೆಸಿ, ಎತ್ತಿಹಾಕಿದ್ದರಿಂದ ಆಟೋ ಸಂಪೂರ್ಣ ಜಖಂಗೊಂಡಿದೆ.

ಭಾನುವಾರದಿಂದ ಹತ್ತುಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಈ ಭಾಗದಲ್ಲಿ ಬೀಡು ಬಿಟ್ಟಿದ್ದು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚಾರ ಮಾಡುತ್ತಿವೆ. ಅದರಿಂದ ಈ ಭಾಗದಲ್ಲಿ ದಿನದಿಂದ ದಿನಕ್ಕೆ ಕಾಡಾನೆ ಸಮಸ್ಯೆ ಬಿಗಡಾಯಿಸುತ್ತಿದ್ದು, ಕಾಫಿ

» ನಾಲ್ಕನೇ ಪುಟದಲ್ಲಿ

# ಕಾರ್ಯಕರ್ತರೇ ಜೆಡಿಎಸ್ ಶಕ್ತಿ: ಶಾಸಕ ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜೆಡಿಎಸ್‌ಗೆ ಕಾರ್ಯಕರ್ತರೇ ಶಕ್ತಿಯಾಗಿದ್ದು, ಅವರ ಬೆಂಬಲದಿಂದಲೇ ಪಕ್ಷ ಸದೃಢವಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಮುದ್ದಾಪುರ ಗ್ರಾಮದಲ್ಲಿ 15ಕ್ಕೂ ಹೆಚ್ಚು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ನಾಯಕತ್ವದಲ್ಲಿ ಕಾರ್ಯಕರ್ತರ ಪರಿಶ್ರಮದಿಂದ ಪಕ್ಷ ಸದೃಢವಾಗಿದೆ ಎಂದು ತಿಳಿಸಿದರು.

ಮುದ್ದಾಪುರ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ನನ್ನ ಅಭಿವೃದ್ಧಿ ಕೆಲಸಗಳನ್ನು ಮೆಚ್ಚಿ ಜೆಡಿಎಸ್‌ಗೆ ಸೇರ್ಪಡೆಗೊಂಡಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ, ಒಳಚರಂಡಿ ಸೇರಿ ಹಲವು ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಲಾಗಿದೆ. ಮುಂಬರುವ ದಿನಗಳಲ್ಲೂ ಗ್ರಾಮದ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ಏ.9ರಂದು ನಡೆಯಲಿರುವ ಬಾಗಲಕೋಟೆ ಹಾಗು ದಾವಣಗೆರೆ ದಕ್ಷಿಣ ಕ್ಷೇತ್ರ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ದಾಖಲಿಸುತ್ತಾರೆ. ಈ ಉಪಚುನಾವಣೆ ಅತ್ಯಂತ ಮಹತ್ವದ್ದಾಗಿದೆ. ಅವರ ಗೆಲುವಿಗೆ ಜೆಡಿಎಸ್ ಶಕ್ತಿ ಮೀರಿ ಕೆಲಸ ಮಾಡಲಿದೆ ಎಂದರು.

ಕಾಂಗ್ರೆಸ್ ಮುಖಂಡರಾದ ಸಂತೋಷ್, ಶಶಿ, ನವೀನ್, ಶ್ರೀನಿವಾಸ್, ವಾಸು, ಪ್ರಕಾಶ್, ಹರೀಶ್, ಪ್ರಸನ್ನ, ಶೇಖರಪ್ಪ, ಶರತ್, ಶಶಿಧರ್, ಸಂತೋಷ್ ಸೇರಿ ಅನೇಕರು ಜೆಡಿಎಸ್ ಸೇರ್ಪಡೆಯಾದರು.

## ನಾಳೆ ನಾಡ ರಥೋತ್ಸವ : ಶಾಸಕ ಹೆಚ್.ಕೆ.ಸುರೇಶ್ ಅಂತಿಮ ಸಿದ್ಧತೆ ಪರಿಶೀಲನೆ

# ಇಂದು ಬೇಲೂರಿನ ಚನ್ನಕೇಶವಸ್ವಾಮಿ ಬ್ರಹ್ಮ ರಥೋತ್ಸವ

• ಪ್ರಜೋದಯ ವರದಿ

**ಬೇಲೂರು:** ಜಗತ್ಪ್ರಸಿದ್ಧ ಶ್ರೀ ಚನ್ನಕೇಶವಸ್ವಾಮಿ ಬ್ರಹ್ಮರಥೋತ್ಸವ ಮಂಗಳವಾರ, ನಾಡ ರಥೋತ್ಸವ ಬುಧವಾರ ನಡೆಯಲಿದೆ. ಈ ಹಿನ್ನಲೆ ಶಾಸಕ ಹೆಚ್.ಕೆ.ಸುರೇಶ್ ಅವರು ಸೋಮವಾರ ಅಂತಿಮ ಸುತ್ತಿನ ಸಿದ್ಧತೆ ಪರಿಶೀಲನೆ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಥೋತ್ಸವದ ನಿಮಿತ್ತ ಎಲ್ಲಾ ರೀತಿಯ ವ್ಯವಸ್ಥೆ ಗಳನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ. ಜಾತ್ರೆಗೆ ಆಗಮಿಸುವ ಭಕ್ತರಿಗೆ ತೊಂದರೆ ಉಂಟಾಗದಂತೆ ಅಗತ್ಯ ವ್ಯವಸ್ಥೆ ಕಲ್ಪಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕಲ್ಯಾಣಿ, ಶೌಚಾಲಯ, ಪಾರ್ಕಿಂಗ್ ವ್ಯವಸ್ಥೆ, ದೇವಸ್ಥಾನ ಸುತ್ತಮುತ್ತ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಸೇರಿ ದೇವಸ್ಥಾನದ ಒಳಭಾಗದಲ್ಲಿ ನೆಲಹಾಸು ಮುಂತಾದ ಅಗತ್ಯ ಸೌಕರ್ಯ ಗಳನ್ನು ಪರಿಶೀಲಿಸಲಾಗಿದೆ ಎಂದು ಹೇಳಿದರು.

ಕುಡಿಯುವ ನೀರು, ಕಲ್ಯಾಣಿ

ಸುತ್ತಮುತ್ತ ಹಾಗು ಶೌಚಾಲಯ ವ್ಯವಸ್ಥೆ ಗಳನ್ನು ಸಮರ್ಪಕವಾಗಿ ಮಾಡಲಾಗಿದೆ. ಸಿಸಿ ಕ್ಯಾಮೆರಾ ಮತ್ತು ವಿದ್ಯುತ್ ವ್ಯವಸ್ಥೆಯನ್ನು ನಾಲ್ಕು ಭಾಗಗಳಲ್ಲಿ ಅಳವಡಿಸಲಾಗಿದೆ. ಪಾರ್ಕಿಂಗ್ ವ್ಯವಸ್ಥೆಯನ್ನು ಈಗಾಗಲೇ ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ. ಸ್ಥಳೀಯರ ಸಹಕಾರ ಅತ್ಯಂತ ಮುಖ್ಯವಾಗಿದೆ. ರಥೋತ್ಸವದ ಸಮಯ ದಲ್ಲಿ ದೇವಸ್ಥಾನದ ಸುತ್ತ ವಾಹನಗಳನ್ನು ಬಿಡಬಾರದೆಂದು ಸೂಚಿಸಿದರು.

ಶಿಷ್ಟಾಚಾರವನ್ನು ಯಾವುದೇ ಕಾರಣಕ್ಕೂ ಉಲ್ಲಂಘಿಸಬಾರದು. ಉಲ್ಲಂಘನೆಯಾದರೆ ಕ್ರಮ ಕೈಗೊಳ್ಳಲಾಗುವುದು. ಸಣ್ಣಪುಟ್ಟ ಲೋಪದೋಷಗಳು ಕಂಡುಬಂದರೆ ಅವುಗಳನ್ನು ತಕ್ಷಣ ಸರಿಪಡಿಸಲಾಗುವುದೆಂದು ಹೇಳಿದರು.

**ತಾಲ್ಲೂಕಿನ ಜನತೆಗೆ ಕ್ಷಮೆಯಾಚನೆ**

ಕಳೆದ ವರ್ಷ ತಿಳಿಯದೆ ರಥದಲ್ಲಿ ತೆರಳಿದ ಘಟನೆ ಕುರಿತು ವಿಷಾದ ವ್ಯಕ್ತಪಡಿಸಿದ ಶಾಸಕ ಹೆಚ್.ಕೆ.ಸುರೇಶ್ ಅವರು, ಆ ಘಟನೆ ನನಗೆ ತುಂಬಾ ನೋವು ತಂದಿದೆ. ಅದರ ಬಗ್ಗೆ ಪಶ್ಚಾತ್ತಾಪವಿದೆ. ನಾನು ಭಗವಂತನಲ್ಲಿ ಕ್ಷಮೆಯಾಚಿಸಿದ್ದೇನೆ. ಇಂದು ಸಾರ್ವಜನಿಕವಾಗಿ ತಾಲ್ಲೂಕಿನ ಜನತೆ ಹಾಗು ದೇವರಲ್ಲಿ ಕ್ಷಮೆ ಕೇಳುತ್ತೇನೆ. ಇದು ಭಗವಂತನ ರಥೋತ್ಸವ, ಜನರ ರಥೋತ್ಸವ ವಲ್ಲ ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕೆಂದರು.

### ಲೋಪವಾದರೆ ಅಧಿಕಾರಿಗಳೇ ಹೊಣೆ

**ಸುಮಾರು 909 ವರ್ಷಗಳ ಇತಿಹಾಸ ಹೊಂದಿರುವ ಈ ವಿಶ್ವವಿಖ್ಯಾತ ದೇವಸ್ಥಾನಕ್ಕೆ ದೇಶ-ವಿದೇಶಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ಅವರಿಗೆ ಯಾವುದೇ ಲೋಪ ಉಂಟಾಗದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಕರ್ತವ್ಯ. ಜಾತ್ರೆ ಸಂದರ್ಭದಲ್ಲಿ ಸಮಸ್ಯೆ ಕಂಡು ಬಂದರೆ ಸಂಬಂಧಿಸಿದ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆಂದು ಹೆಚ್.ಕೆ.ಸುರೇಶ್ ಅವರು ಎಚ್ಚರಿಸಿದರು.**

**ಅಧಿಕಾರಿಗಳ ವಿರುದ್ಧ ಅಸಮಾಧಾನ**

ಸ್ಥಳೀಯರಿಗೆ ಆದ್ಯತೆ ನೀಡಬೇಕು. ಸ್ಥಳೀಯರಿದ್ದರೆ ಮಾತ್ರ ವ್ಯವಸ್ಥೆಗಳು ಸಮರ್ಪಕವಾಗಿ ನಡೆಯುತ್ತವೆ. ಜಿಲ್ಲಾಡಳಿತ ಅಥವಾ ಜಿಲ್ಲಾಧಿಕಾರಿ ಇಲ್ಲಿಗೆ ಬಂದು ಕಾರ್ಯನಿರ್ವಹಿಸುವುದಿಲ್ಲ, ಇಲ್ಲಿ ಕೆಲಸ ಮಾಡುವವರು ಸ್ಥಳೀಯರೇ. ಆದ್ದರಿಂದ ಅವರಿಗೆ ಮೊದಲ ಆದ್ಯತೆ ನೀಡಬೇಕೆಂದು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಪುರಸಭೆ ಪ್ರಭಾರ ಅಧ್ಯಕ್ಷೆ ಉಷಾ ಸತೀಶ್, ಮಾಜಿ ಅಧ್ಯಕ್ಷ ಅಶೋಕ್, ಉಪವಿಭಾಗಾಧಿಕಾರಿ ಮಂಜುನಾಥ್, ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಕಾರ್ಯ ನಿರ್ವಹಣಾಧಿಕಾರಿ ಯೋಗೇಶ್, ಸಿಪಿಐ ರೇವಣ್ಣ, ಮುಖ್ಯಾಧಿಕಾರಿ ಬಸವರಾಜು ಟಾಕಪ್ಪ ಶಿಗ್ಗಾವಿ, ಆರೋಗ್ಯಾ ಧಿಕಾರಿ ಲೋಹಿತ್, ವಲಯ ಅರಣ್ಯಾಧಿಕಾರಿ ಯತೀಶ್ ಇತರರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಡೀಸೆಲ್ ಕೊರತೆ ಇಲ್ಲ

• ಪ್ರಜೋದಯ ವರದಿ

**ಬೆಂಗಳೂರು:** ರಸ್ತೆ ಸಾರಿಗೆ ನಿಗಮಗಳಿಗೆ ಸದ್ಯ ಡೀಸೆಲ್ ಕೊರತೆಯ ಸಮಸ್ಯೆ ಇಲ್ಲವೆಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ತಕ್ಷಣಕ್ಕೆ ನಾಲ್ಕು ನಿಗಮಗಳಿಗೂ ಯಾವುದೇ ಸಮಸ್ಯೆ ಇಲ್ಲ, ಯುದ್ಧ ಹೀಗೆಯೇ ಮುಂದುವರಿದರೆ ಸಮಸ್ಯೆ ಆಗಬಹುದು. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಂ ಮತಗಳನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ಮತ ಕೇಳುವ ಹಕ್ಕು ಬಿಜೆಪಿಗಿದೆ. ಈ ಕ್ಷೇತ್ರದ ಟಿಕೆಟ್ ನೀಡುವಂತೆ ಪಕ್ಷದ ನಾಯಕರಲ್ಲಿ ಮುಸ್ಲಿಮರು ಬೇಡಿಕೆ ಇಟ್ಟಿದ್ದರು. ಆದರೆ, ಕೊಡಲು ಸಾಧ್ಯವಾಗಿಲ್ಲ. ಮುಂದೆ ರಾಜ್ಯಸಭೆ, ಪರಿಷತ್ ಸ್ಥಾನ ಕೊಡುವುದಾಗಿ ತಿಳಿಸಲಾಗಿದೆ. ಕಾಂಗ್ರೆಸ್ ಪಕ್ಷ ಟಿಕೆಟ್ ಕೊಟ್ಟಿಲ್ಲ ಎಂದು ಮುಸ್ಲಿಂ ಸಮುದಾಯದವರು ಬಿಜೆಪಿಗೆ ಮತ ಹಾಕುವುದಿಲ್ಲ, ಅದನ್ನು ಜೆಪಿಯವರು ಅರ್ಥ ಮಾಡಿಕೊಳ್ಳಬೇಕೆಂದರು.

# ಚಲಿಸುವ ಬಸ್‌ಗಳು ಧಗಧಗ: ಇನ್ನೂ ಎಷ್ಟು ಬಲಿಗಳು ಬೇಕು?

ಆಂಧ್ರಪ್ರದೇಶದಲ್ಲಿ ಗುರುವಾರ ನಸುಕಿನ ಜಾವ ಖಾಸಗಿ ಬಸ್ ಹಾಗೂ ಜಲ್ಲಿಕಲ್ಲು ತುಂಬಿದ್ದ ಟಿಪ್ಪರ್ ನಡುವೆ ಅಪಘಾತ ಸಂಭವಿಸಿ 14 ಮಂದಿ ಸಜೀವ ದಹನವಾದ ದುರಂತ ಸಂಭವಿಸಿದೆ. ಮತ್ತೊಂದೆಡೆ, ಬೆಂಗಳೂರಿನ ಜನನಿಬಿಡ ಓಕಳೀಪುರ ರಸ್ತೆಯಲ್ಲಿ ಗುರುವಾರ ರಾತ್ರಿ ಶಿವಮೊಗ್ಗ ಕಡೆ ಹೊರಟಿದ್ದ ಕೆ ಎಸ್ ಆರ್ ಟಿ ಸಿ ಬಸ್ ನಡುರಸ್ತೆಯಲ್ಲೇ ಧಗಧಗಿಸಿದೆ. ಅದೃಷ್ಟವಶಾತ್ ಪ್ರಾಣಾಪಾಯ ಸಂಭವಿಸಿಲ್ಲವಾದರೂ ಈ ಎರಡು ಘಟನೆಗಳು ಬಸ್ ಪ್ರಯಾಣದ ಸುರಕ್ಷತೆಯ ಬಗ್ಗೆ ಮತ್ತೊಮ್ಮೆ ಪ್ರಶ್ನೆಯನ್ನು ಮುಂದಿಟ್ಟಿವೆ. ದೇಶದಲ್ಲಿ ಬಸ್‌ಗಳು ಚಲಿಸುತ್ತಿರುವಾಗಲೇ ಬೆಂಕಿ ಹೊತ್ತಿಕೊಂಡು ಹಲವು ಮಂದಿ ಸುಟ್ಟುಕರಕಲಾದ ಸಾಕಷ್ಟು ನಿದರ್ಶನಗಳು ಸಿಗುತ್ತವೆ. ಇಂತಹ ಘಟನೆಗಳನ್ನು ತಪ್ಪಿಸಲು ತುರ್ತು ನಿರ್ಗಮನ ದ್ವಾರ, ಬಿಗಿ ತಪಾಸಣೆ ಸೇರಿದಂತೆ ಸರ್ಕಾರಗಳು ಹಲವು ಸುರಕ್ಷತಾ ಕ್ರಮಗಳನ್ನು ಜಾರಿಗೆ ತಂದಿದ್ದರೂ ಈ ದುರಂತಗಳು ತಪ್ಪುತ್ತಿಲ್ಲ. ಇದಕ್ಕೆ ಏನು ಕಾರಣ? ಯಾರು ಹೊಣೆ? ಬಸ್‌ಗಳಲ್ಲಿ ಪ್ರಯಾಣ ಮಾಡುವವರಿಗೆ ಗಮ್ಯ ತಲುಪುವ ಯಾವುದೇ ಖಾತ್ರಿಯು ಇಲ್ಲದಂತಾಗಿದೆ.

ಇಂತಹದ್ದೆಲ್ಲಾ ನಿಲ್ಲಲು ಇನ್ನೂ ಎಷ್ಟು ವರ್ಷಗಳು ಬೇಕು? ಬೆಂಗಳೂರಿನ ಮೆಜೆಸ್ಟಿಕ್ ನಿಂದ ಹೊರಟ ಕೆಲವೇ ನಿಮಿಷದಲ್ಲಿ ಬಸ್ ಒಂದರಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತದೆ. ತಕ್ಷಣ ಪ್ರಯಾಣಿಕರನ್ನು ಇಳಿಸಲಾಗಿದೆ. ಯಾವುದೇ ಪ್ರಾಣ ಹಾನಿ ಆಗಿಲ್ಲ. ಮಧ್ಯರಾತ್ರಿ ಪ್ರಯಾಣಿಕರು ಗಾಢ ನಿದ್ರೆಯಲ್ಲಿರುವಾಗ ಬೆಂಕಿ ಕಾಣಿಸಿಕೊಂಡಿದ್ದರೆ ದೊಡ್ಡ ಅನಾಹುತವೇ ಆಗಿಬಿಡುತ್ತಿತ್ತು.

ಆಂಧ್ರಪ್ರದೇಶದಲ್ಲಿ ಟಿಪ್ಪರ್ ಗೆ ಬಸ್ ಡಿಕ್ಕಿಯಾಗಿ, ಬಸ್ ನ ಡೀಸೆಲ್ ಟ್ಯಾಂಕ್ ಗೆ ಬೆಂಕಿ ಹೊತ್ತಿಕೊಂಡಿದ್ದರಿಂದ ದುರಂತವಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿರುವ ಮಾಹಿತಿ. ಅಪಘಾತಗಳ ಸಂದರ್ಭದಲ್ಲಿ ಇಂಧನ ಟ್ಯಾಂಕ್‌ನಿಂದ ಬೆಂಕಿ ಹೊತ್ತಿಕೊಂಡ ಸಾಕಷ್ಟು ಉದಾಹರಣೆಗಳು ಇವೆ. ಆಟೋಮೊಬೈಲ್ ಕಂಪನಿಗಳು ತಮ್ಮ ವಾಹನಗಳ ಮಾರಾಟಕ್ಕೆ ನೀಡುವಷ್ಟು ಒತ್ತನ್ನೇ ಈ ಇಂಧನ ಟ್ಯಾಂಕ್‌ಗೆ ಬೆಂಕಿ ಬೀಳದಂತೆ ಮಾಡುವುದಕ್ಕೂ ಲಕ್ಷ್ಯ ವಹಿಸಬೇಕಿದೆ. ಈಗಾಗಲೇ ಸರ್ಕಾರಿ ಸ್ವಾಮ್ಯದ ಅಡುಗೆ ಅನಿಲ ಕಂಪನಿಗಳು ಸಿಲಿಂಡರ್ ಸ್ಫೋಟ ತಡೆಗೆ ಪಾಲಿಎಥಿಲೀನ್ ಮೊರೆ ಹೋಗಿವೆ. ಅಂಥದರ ಬಗ್ಗೆ ಆಟೋಮೊಬೈಲ್ ಕಂಪನಿಗಳೂ ಗಮನಹರಿಸುವುದು ಒಳಿತು. ಪದೇ ಪದೇ ಬಸ್‌ಗಳಿಗೆ ಬೆಂಕಿ ಬಿದ್ದು ಅಮಾಯಕ ನಾಗರಿಕರು ಸಾವಿಗೀಡಾಗುವುದನ್ನು ತಪ್ಪಿಸಲು ಸರ್ಕಾರಗಳು ಸಾರಿಗೆ ತಜ್ಞರ ಸಮಿತಿ ರಚಿಸಿ ಸೂಕ್ತ ಸಲಹೆಗಳನ್ನು ಪಡೆಯುವುದು ಒಳಿತು. ಬಸ್ ಲಾಬಿಗೆ ಮಣಿಯದೆ ಅವನ್ನು ತುರ್ತಾಗಿ ಜಾರಿಗೆ ಕೂಡ ತರಬೇಕು.

## ಜಿಪುಣ

ಇವತ್ತು ಸಂಜೆ ರಾಜೇಶ್ ಸಿಕ್ಕಿದಾಗ ಮಾತನಾಡುತ್ತಿದ್ದ. ನೆನ್ನೆ ತಾನೆ ಜೀವರಾಜ್ ಅವರಪ್ಪನ ತಿಥಿಗೆ ಹೋಗಿದ್ದೆ. ಅಡುಗೆಯೇನೂ ಅಷ್ಟು ರುಚಿಯಾಗಿರಲಿಲ್ಲ, ಅವನು ದುಡ್ಡು ಉಳಿಸುವ ಯೋಚನೆ ಮಾಡ್ತಾ ಇದ್ದಾನೆ ಅಪ್ಪನ ಶ್ರಾದ್ಧವನ್ನಾದರೂ ಒಂದಷ್ಟು ವಿಶೇಷವಾಗಿ ಮಾಡಬೇಕಿತ್ತು. ಅವರಿಂದ ಅವನು ಬದುಕು ಕಟ್ಟಿಕೊಂಡದಲ್ವಾ? ಯಾಕೆ ಹೀಗೆ ಉಳಿಸ್ತಾ ಉಳಿಸ್ತಾ, ಪರದಾಡ್ತಾರೆ ಗೊತ್ತಾಗ್ತಾ ಇಲ್ಲ. ಮನೆ ತಲುಪುವಷ್ಟರಲ್ಲಿ ಅವನಪ್ಪನಿಗೆ ಹುಷಾರು ತಪ್ಪಿತ್ತು. ದುಡ್ಡು ಖರ್ಚಾಗುತ್ತದೆ ಎನ್ನುವ ಕಾರಣಕ್ಕೆ ಸರಕಾರಿ ಆಸ್ಪತ್ರೆಗೆ ಸೇರಿಸಿ ಬಿಟ್ಟಿದ್ದ.

ವೈದ್ಯರು ಆಪರೇಷನ್ ಮಾಡಬೇಕು ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಂತಂದ್ರು, ಯಾವುದಾದರೂ ಮಾತ್ರೆ ಕೊಟ್ಟು ಕಡಿಮೆ ಮಾಡಿ ಬಿಡಿ ಸರ್ ದುಡ್ಡಿನ ಕಷ್ಟ ತುಂಬಾ ಇದೆ ಬದುಕು ದೂಡುವುದಕ್ಕೆ ಕಷ್ಟ ಆಗ್ತಾ ಇದೆ. ಅವರ

ಕೊನೆ ಕ್ಷಣದಲ್ಲಿ ದುಡ್ಡು ಖರ್ಚು ಮಾಡಿದರೆ ಮುಂದೆ ಜೀವನ ಪೂರ್ತಿ ಸಾಲ ಕಟ್ಟುವ ಪರಿಸ್ಥಿತಿ ಆಗುತ್ತೆ. ಏನಾಗುತ್ತೋ ದೇವರು ನೋಡಿಕೊಳ್ಳಲಿ ಅಂದು ಹೊರಬಂದು ಬಿಟ್ಟಿದ್ದ. ಆ ದಿನವೇ ಅಪ್ಪ ಉಸಿರು ನಿಲ್ಲಿಸಿದ್ದರು. ಎರಡು ದಿನದಲ್ಲಿ ಅವನ ಮನೆಯ ಮುಂದೆ ಅಂದದ ಬಣ್ಣದ ಕಾರು ಒಂದು ಮಿನುಗುತ್ತಾ ನಿಂತಿತ್ತು. ಅಲ್ಲಿ ದುಡ್ಡಿನ ಸಾಲದ ಯೋಚನೆ ಅವನಿಗೆ ಇರಲಿಲ್ಲ

**- ಧೀರಜ್** ಬೆಳ್ಳಾರೆ

# ಘಟನೆಗಳು ಪರಿವರ್ತನೆ ಮಾಡುತ್ತವೆ

ಈ ಘಟನೆ ಓದಿ. ನಾನು ದಿವ್ಯಾನುಭವ ಪುಸ್ತಕ ಓದುತ್ತಿದ್ದಾಗ ಅಲ್ಲಿದ್ದ ವಿವರ ಇದು. ಮಹಾರಾಷ್ಟ್ರದಲ್ಲಿ ನಡೆದ ಘಟನೆ. ಆ ಒಂದು ಘಟನೆ ಆತನನ್ನು ದೊಡ್ಡ ಸಂತನನ್ನಾಗಿ ಮಾಡಿತು. ಸಂತನಾದ ವ್ಯಕ್ತಿ ಮೊದಲು ಕೊಲೆ, ಸುಲಿಗೆ ಮತ್ತು ಕಳ್ಳತನ ಮಾಡುತ್ತಿದ್ದನು. ಈ ರೀತಿಯ ಕೆಲಸಗಳಿಂದ ಆತನ ಜೀವನ ಸಾಗಿತ್ತು. ಸಾಕಷ್ಟು ಸಂಪತ್ತು ಗಳಿಸಿದ್ದನು. ಮಾರು ವೇಷದಲ್ಲಿ ಊರು ಊರು ಅಲೆಯುತ್ತಿದ್ದನು. ಒಂದು ದಿನ ಒಂದು ಹಳ್ಳಿಗೆ ಬಂದು ಊರ ಹೊರಗಿನ ಗುಡಿಯ ಮುಂದೆ ವಿಶ್ರಾಂತಿ ಪಡೆಯುತ್ತಿದ್ದನು. ಓರ್ವ ತಾಯಿ ತನ್ನ ಮಗುವನ್ನು ಎತ್ತಿಕೊಂಡು ಆ ದೇವಸ್ಥಾನಕ್ಕೆ ಬಂದಳು. ದೇವರ ದೀಪಕ್ಕೆ ಎಣ್ಣೆ ಎರೆದು, ಬತ್ತಿ ಹಚ್ಚಿ, ಕಣ್ಣುಮುಚ್ಚಿ ಕೈ ಮುಗಿಯುತ್ತಿದ್ದಳು. ಅಷ್ಟರಲ್ಲಿ ಆ ತಾಯಿಯ ಕಂಕಳಿನಲ್ಲಿ ಇದ್ದ ಮಗು ಅಪ್ಪ, ಅಪ್ಪ, ಅಪ್ಪ ಎಂದು ಕರುಳು ಕಿತ್ತು ಬರುವಂತೆ ಅಳುತ್ತಿತ್ತು. ಆ ಎಳೆಯ ಮಗುವಿನ ಅಳುವನ್ನು ಕೇಳಿ, ತಾಯಿ ಕಣ್ಣಲ್ಲಿ ನೀರು ದಾರಿ ಇಟ್ಟಿತು. ಬಿಕ್ಕಿ ಬಿಕ್ಕಿ ಅಳುತ್ತಾ ತಾಯಿ ದೇವರಿಗೆ ಪ್ರಾರ್ಥಿಸಿದಳು. ದೇವರೇ, ತಿಂಗಳ ಹಿಂದೆ ಕೊಲೆಗಡುಕನೊಬ್ಬ ಈ ಮಗುವಿನ ತಂದೆಯನ್ನು ಕೊಂದು ಸಂಪತ್ತನ್ನೆಲ್ಲ ದೋಚಿಕೊಂಡು ಹೋದ. ಈಗ ಈ ಮಗುವಿಗೆ ಹೇಗೆ ಹೇಳಲಿ?. ಅದರ ತಂದೆಯನ್ನು ನಾನು ಹೇಗೆ? ಎಲ್ಲಿಂದ? ತಂದು ತೋರಿಸಲಿ. ತಾಯಿಯ ಈ ನುಡಿಯನ್ನು ಕೇಳಿದ ಕಲ್ಲು ದೇವರ ಕಣ್ಣಿನಿಂದಲೂ ಒಂದೆರಡು ಹನಿ ನೀರು ಉದುರಿದಂತೆ ಆಯಿತು.



ತಾಯಿ ಮಗುವಿನ ಅಳು ಮಂದಿರದ ತುಂಬಾ ಹೊರಸೂಸಿ ಹೊರಗಿದ್ದ ವ್ಯಕ್ತಿ ಎದೆಗೆ ಅಪ್ಪಳಿಸಿತು. ಆಗ ಆ ವ್ಯಕ್ತಿಯ ಕಣ್ಣು ತೇವಗೊಂಡಿತ್ತು. ತಾಯಿ ಮಗು ಹೊರ ಬರುತ್ತಲೆ ಆ ವ್ಯಕ್ತಿ ಕೇಳಿದ. ತಾಯಿ ನಿನ್ನ ದುಃಖದ ಕಾರಣವೇನಮ್ಮ?. ನಡೆದ ಘಟನೆಯನ್ನು ಹೇಳುತ್ತಾ ಗೋಳಾಡಿದಳು. ಆಗ ಈ ಮಗುವಿನ ತಂದೆಯನ್ನು ಕೊಂದವನು ಯಾರು ಎಂದು ತಿಳಿಯಲು ಆ ವ್ಯಕ್ತಿಗೆ ತಡವಾಗಲಿಲ್ಲ. ಆ ವ್ಯಕ್ತಿಯೇ ಕೊಂದಿದ್ದು. ತಕ್ಷಣ ತನ್ನಲ್ಲಿದ್ದ ಸಂಪತ್ತನ್ನು ಆ ತಾಯಿಗೆ ಕೊಟ್ಟು ಇದರಿಂದ ನಿನ್ನ ಮಗುವಿನ ರಕ್ಷಣೆ ಮಾಡಮ್ಮ ಎಂದು ಹೇಳಿ ಕಳುಹಿಸಿದನು.

ಬಳಿಕ ಮಂದಿರದ ಒಳಗೆ ಹೋಗಿ ದೇವರಿಗೆ ಕೈ ಮುಗಿದು ಹೇಳಿದನು. ತಂದೆಯೇ ನೀನು ನನ್ನನ್ನು ಕ್ಷಮಿಸು. ನನ್ನ ಪಾಪಗಳನ್ನೆಲ್ಲ ತೊಳೆದು ಬಿಡು. ಇಂದಿನಿಂದ ನಾನು ನಿನ್ನ ಚರಣ ಸೇವೆಯಲ್ಲಿ ಉಳಿದುಬಿಡುತ್ತೇನೆ ಎಂದು ಬೇಡಿಕೊಂಡನು. ಆ ವ್ಯಕ್ತಿಯ ಮಾತು ಕೇಳಿ ಆ ಕಲ್ಲು ದೇವರ ಕಣ್ಣಲ್ಲಿ ಆನಂದ ಭಾಷ್ಪ ಉದರಿತು. ಆತನೇ ಮುಂದೆ ದೊಡ್ಡ ಸಂತನಾದನು. ಅಖಂಡ ಮಹಾರಾಷ್ಟ್ರ ಇಂದು ಆತನನ್ನು ದೇವರೆಂದು ಗೌರವಿಸುತ್ತದೆ. ಈ ಲೇಖನ ಓದಿದ ನಿಮಗೆ ಹೇಳಬೇಕೆಂದೆನಿಸಿತು. ಏಕೆಂದರೆ ಮನಸು ತೆರೆದಿದ್ದರೆ ನಮ್ಮನ್ನು ಬದಲಾಯಿಸುವ ಘಟನೆಗಳು ಪ್ರತಿನಿತ್ಯ ನಡೆಯುತ್ತಿರುತ್ತದೆ. ಸ್ವಚ್ಛ ಮನಸ್ಸಿನಿಂದ ಮಧುರ ಭಾವದಿಂದ ಈ ಘಟನೆಗಳನ್ನು ನೋಡಿದರೆ ಕೇಳಿದರೆ ನಾವು ದೊಡ್ಡವರಾಗಬಹುದು ಅಲ್ಲವೇ?

**- ಎಂ.ಪಿ. ಜ್ಞಾನೇಶ್,** ಮಂಗಳೂರು

**ಬ್ರಿಟಿಷ್ ಕಾಲದ ಬಂಗಲೆ : ನರಿಮಲೆ ಅರಣ್ಯ ವಿಶ್ರಾಂತಿ ಗೃಹವನ್ನು ಮೂಲತಃ ಬ್ರಿಟಿಷರು ನಿರ್ಮಿಸಿದ್ದು, ಈ ಬಂಗಲೆಗೆ ಹೋಗಲು ಮೊದಲು ರಾಜರ ಕಾಲದಲ್ಲಿ ಕುದುರೆ ರಸ್ತೆ ನಿರ್ಮಿಸಿದ್ದು, ಅದರ ಕುರುಹನ್ನು ಈಗಲೂ ಕಾಣಬಹುದು. ಈ ಬಂಗಲೆಯನ್ನು, 10 ವರ್ಷಗಳ ಹಿಂದೆ ಪುನರ್ನಿರ್ಮಾಣ ಮಾಡಿದ್ದು, ಇಲ್ಲಿ ಪ್ರವಾಸಿಗರು ರಾತ್ರಿ ವೇಳೆ ತಂಗಲು ಅವಕಾಶವಿದೆ.**

# ಬ್ರಹ್ಮಗಿರಿ ವನ್ಯಜೀವಿ ಅಭಯಾರಣ್ಯ

ಹಸಿರೇ ಉಸಿರಾಗಿರುವವರಿಗೆ ಹೇಳಿ ಮಾಡಿಸಿದ ತಾಣ ಕೊಡಗಿನ ಬ್ರಹ್ಮಗಿರಿ ವನ್ಯಜೀವಿ ಅಭಯಾರಣ್ಯ. ಕೊಡಗು ಬೆರಗು ಹುಟ್ಟಿಸುವಷ್ಟು ಸೌಂದರ್ಯ ಅಡಕ ಮಾಡಿಕೊಂಡಿದೆ. ಅದರಲ್ಲೂ ಬ್ರಹ್ಮಗಿರಿ ವನ್ಯಜೀವಿ ಅಭಯಾರಣ್ಯ, ಬೆಟ್ಟದ ಬುಡದ ಇರ್ಪು ಜಲಪಾತ ದರ್ಶನ ಅದರ ಮಜವೇ ಬೇರೆ.

ಕೊಡಗಿನ ವಿರಾಜಪೇಟೆ ತಾಲ್ಲೂಕಿನ ಕುರ್ಚಿ ಗ್ರಾಮದ ಇರ್ಪು ಎಂಬಲ್ಲಿಂದ ಚಾರಣ ಶುರು. ಸಮುದ್ರಮಟ್ಟದಿಂದ ಸುಮಾರು 905 ಮೀ. ಎತ್ತರದಲ್ಲಿದೆ. ನರಿಮಲೆ ಅರಣ್ಯ ವಿಶ್ರಾಂತಿ ಗೃಹ, ಮುನಿಕಲ್ ಗುಹೆ ಬ್ರಹ್ಮಗಿರಿ ಬೆಟ್ಟದ ಹೈಲೈಟ್, ಬೆಟ್ಟದ ಮೇಲೆ ವಿಶಾಲ ಮೈದಾನ ಪ್ರದೇಶ ಚೆಂಡು ಮಾಳವಿದೆ. ಕಾಡೆಮ್ಮೆ ಮೇಯುವ ಕಾಟಿಮಾಳ, ಬೃಹತ್ ಬಂಡೆ ಭೀಮಕಲ್ಲು. ಇರ್ಪುವಿನಿಂದ ನರಿಮಲೆ ಗೆಸ್ಟ್ ಹೌಸ್‌ಗೆ 4.5 ಕಿ.ಮೀ. ಅಲ್ಲಿಂದ ಮುನಿಕಲ್‌ಗೆ 3 ಕಿ.ಮೀ. ದೂರ, ಅಲ್ಲಿಂದ ಬ್ರಹ್ಮಗಿರಿಗೆ 4.5 ಕಿ.ಮೀ. ಹೀಗೆ ಚಾರಣ ಅಂತ್ಯದವರೆಗೆ ಸುಮಾರು 12 ಕಿ.ಮೀ. ನಡೆಯಬೇಕು. ಇಷ್ಟು ನಡಿಗೆಗೆ ಅಂದಾಜು ನಾಲ್ಕು ಗಂಟೆ ಬೇಕು. ಪ್ರಕೃತಿ ದತ್ತ ಕಾಡು, ದೊಡ್ಡ ಮರಗಳು, ಆನೆ, ಜಿಂಕೆ, ಕಡವೆ, ಕಾಡೆಮ್ಮೆ, ಕಾಡು ಹಂದಿ ಇತ್ಯಾದಿಗಳನ್ನು ಚಾರಣ ವೇಳೆ ವೀಕ್ಷಿಸಲು ಸಾಧ್ಯ. ಬೆಳಗಿನ ಜಾವದಲ್ಲಿ ಪ್ರಾಣಿಗಳು ಮೇಯಲು ಬರುವುದರಿಂದ ಈ ಹೊತ್ತಿನಲ್ಲಿ ದರ್ಶನ ಭಾಗ್ಯ ಸುಲಭ.

ಬೆಟ್ಟದ ಮೇಲಿನ ಮುನಿಕಲ್ ಗುಹೆಯಿಂದ ಕೇರಳದ ಕ್ಷೇತ್ರವೊಂದಕ್ಕೆ ಸಂಪರ್ಕವಿದೆ ಎಂಬ ಪ್ರತೀತಿ. ಗುಹೆಯಲ್ಲಿ ಒಂದು ದ್ವಾರವಿದ್ದು, ಜನ ಹಿಂದೆಲ್ಲಾ ಸಂಚರಿಸುತ್ತಿದ್ದರಂತೆ. ಬ್ರಿಟಿಷ್ ಕಾಲದ ಬಂಗಲೆ : ನರಿಮಲೆ ಅರಣ್ಯ ವಿಶ್ರಾಂತಿ ಗೃಹವನ್ನು ಮೂಲತಃ ಬ್ರಿಟಿಷರು ನಿರ್ಮಿಸಿದ್ದು, ಈ ಬಂಗಲೆಗೆ ಹೋಗಲು ಮೊದಲು ರಾಜರ ಕಾಲದಲ್ಲಿ ಕುದುರೆ ರಸ್ತೆ ನಿರ್ಮಿಸಿದ್ದು, ಅದರ ಕುರುಹನ್ನು ಈಗಲೂ ಕಾಣಬಹುದು. ಈ ಬಂಗಲೆಯನ್ನು, 10 ವರ್ಷಗಳ ಹಿಂದೆ ಪುನರ್ನಿರ್ಮಾಣ ಮಾಡಿದ್ದು, ಇಲ್ಲಿ ಪ್ರವಾಸಿಗರು ರಾತ್ರಿ ವೇಳೆ ತಂಗಲು ಅವಕಾಶವಿದೆ.

ಚಾರಣದ ಗಮ್ಯವಾದ ಬ್ರಹ್ಮಗಿರಿಯ ತುತ್ತ ತುದಿ ತಲುಪಿದ ವೇಳೆ ಕೇರಳ ಪ್ರದೇಶವನ್ನು ಅಲ್ಲಿಂದಲೇ ವೀಕ್ಷಿಸಬಹುದು. ಮುಂಜಾನೆ 6 ಗಂಟೆಗೆ ಚಾರಣ ಶುರು ಮಾಡಿದರೆ ಸಂಜೆ 6 ಗಂಟೆಗೆ ವಾಪಸ್ ಬರಬಹುದು. ಇಷ್ಟವಿದ್ದರೆ ರಾತ್ರಿ ಬೆಟ್ಟದ ಮೇಲಿನ ನರಿಮಲೆ ವಸತಿಗೃಹದಲ್ಲೇ ಕಳೆಯಬಹುದು. ಹಸಿರೇ ಉಸಿರಾಗಿರುವವರಿಗೆ ಹೇಳಿ ಮಾಡಿಸಿದ ತಾಣ ಕೊಡಗಿನ ಬ್ರಹ್ಮಗಿರಿ ವನ್ಯಜೀವಿ ಅಭಯಾರಣ್ಯ. ಕೊಡಗು ಬೆರಗು ಹುಟ್ಟಿಸುವಷ್ಟು ಸೌಂದರ್ಯ ಅಡಕ ಮಾಡಿಕೊಂಡಿದೆ.

**- ರಮೇಶ ನಾಯ್ಕ, ಉಪ್ಪುಂದ,** ಬೈಂದೂರು

# ಮುಖದ ಮೇಲಿನ ಕಲೆ ಪರಿಣಾಮ

ದ ಫೇಸ್ ಸ್ಕಾರ್ ಎಫೆಕ್ಟ್ ಎಂಬ ಬಗ್ಗೆ ಕೇಳಿದ್ದೀರಾ? ಇದು ಮನೋವಿಜ್ಞಾನ ಮತ್ತು ಸಮಾಜಶಾಸ್ತ್ರದಲ್ಲಿ ಅತ್ಯಂತ ಕುತೂಹಲಕಾರಿ ಮತ್ತು ಆಳವಾದ ಅಧ್ಯಯನದ ವಿಷಯ. ಮುಖದ ಮೇಲಿರುವ ಒಂದು ಸಣ್ಣ ಗಾಯದ ಗುರುತು ಅಥವಾ ಕಲೆಯಿಂದ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಇತರರು ಹೇಗೆ ಅಳೆಯುತ್ತಾರೆ ಮತ್ತು ಆ ವ್ಯಕ್ತಿಯು ತನ್ನನ್ನು ತಾನು ಹೇಗೆ ನೋಡಿಕೊಳ್ಳುತ್ತಾನೆ ಎಂಬುದರ ಮೇಲೆ ಬೀರುವ ಪ್ರಭಾವವನ್ನು ಇದು ವಿವರಿಸುತ್ತದೆ.

ಹಾಗಾದರೆ ಫೇಸ್ ಸ್ಕಾರ್ ಎಫೆಕ್ಟ್ ಎಂದರೇನು? ಸರಳವಾಗಿ ಹೇಳುವುದಾದರೆ, ಮುಖದ ಮೇಲೆ ಗಾಯದ ಗುರುತು ಇರುವ ವ್ಯಕ್ತಿಗಳನ್ನು ಸಮಾಜವು ವಿಭಿನ್ನ ದೃಷ್ಟಿಕೋನದಿಂದ ನೋಡುತ್ತದೆ. ಈ ಎಫೆಕ್ಟ್ ಎರಡು ರೀತಿಯಲ್ಲಿ ಕೆಲಸ ಮಾಡುತ್ತದೆ. ಕೆಲವು ಸಂದರ್ಭಗಳಲ್ಲಿ ಗಾಯದ ಗುರುತು ಇರುವ ಪುರುಷರು ಹೆಚ್ಚು ಆಕರ್ಷಕವಾಗಿ ಅಥವಾ ಧೈರ್ಯಶಾಲಿಯಾಗಿ ಕಾಣುತ್ತಾರೆ.

ಉದ್ಯೋಗ ಅಥವಾ ಸಾಮಾಜಿಕ ಸಂವಹನದಲ್ಲಿ, ಮುಖದ ಮೇಲೆ ಕಲೆ ಇರುವವರನ್ನು ಜನರು ಅರಿವಿಲ್ಲದೆಯೇ ಅಪರಾಧಿ ಮನೋಭಾವದವರು ಅಥವಾ ಕಡಿಮೆ ಸಮರ್ಥರು ಎಂದು ತಪ್ಪಾಗಿ ಭಾವಿಸಬಹುದು. ಮನೋವಿಜ್ಞಾನಿಗಳ ಪ್ರಕಾರ, ಮುಖದ ಮೇಲಿನ ಗಾಯದ ಗುರುತು ಕೇವಲ ಒಂದು ಚರ್ಮದ ಹಾನಿಯಲ್ಲ; ಅದು ಆ ವ್ಯಕ್ತಿಯ ಹಳೆಯ ಕಥೆಯನ್ನು ಹೇಳುತ್ತದೆ.

ಪುರುಷರ ಮುಖದ ಮೇಲಿರುವ ಗಾಯದ ಗುರುತನ್ನು ಪ್ರಕೃತಿಯು ಬದುಕುಳಿಯುವಿಕೆಯ ಶಕ್ತಿ ಎಂದು ಪರಿಗಣಿಸುತ್ತದೆ. ಇದು ಆ ವ್ಯಕ್ತಿಯು ಯಾವುದೋ ಸಂಘರ್ಷ ಅಥವಾ ಕಠಿಣ ಪರಿಸ್ಥಿತಿಯನ್ನು ಎದುರಿಸಿ ಗೆದ್ದು ಬಂದಿದ್ದಾನೆ ಎಂಬ ಸಂದೇಶವನ್ನು ನೀಡುತ್ತದೆ.

ಅಲ್ಪಾವಧಿಯ ಸಂಬಂಧಗಳಿಗಾಗಿ ಮಹಿಳೆಯರು ಮುಖದ ಮೇಲೆ ಸಣ್ಣ ಗಾಯದ ಗುರುತಿರುವ ಪುರುಷರನ್ನು ಹೆಚ್ಚು ಆಕರ್ಷಕ ಎಂದು ಪರಿಗಣಿಸಬಹುದು, ಏಕೆಂದರೆ ಅದು ಅವರಲ್ಲಿ ಮ್ಯಾಚೋ ಇಮೇಜ್ ನೀಡುತ್ತದೆ. ಈ ಪರಿಕಲ್ಪನೆಯನ್ನು ಸಾಬೀತುಪಡಿಸಲು ಒಂದು ಪ್ರಸಿದ್ಧ ಮನೋವಿಜ್ಞಾನ ಪ್ರಯೋಗ ನಡೆಸಲಾಯಿತು.

ಸಂಶೋಧಕರು ಕೆಲವು ಸ್ವಯಂಸೇವಕರ ಮುಖಕ್ಕೆ ಮೇಕಪ್ ಮೂಲಕ ದೊಡ್ಡ ಗಾಯದ ಗುರುತನ್ನು ಮಾಡಿದರು. ನಂತರ ಅವರಿಗೆ ಕನ್ನಡಿ ತೋರಿಸಿ, ಜನರು ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ ನೋಡಿ ಬನ್ನಿ ಎಂದು ಕಳುಹಿಸಿದರು.

ಆದರೆ, ಅವರು ಹೊರಹೋಗುವ ಕೊನೆಯ ಕ್ಷಣದಲ್ಲಿ, ಸಂಶೋಧಕರು ಒಂದು ಸಣ್ಣ ಟಚ್-ಅಪ್ ಮಾಡುತ್ತೇವೆ ಎಂದು ಹೇಳಿ, ಆ ಗಾಯದ ಗುರುತನ್ನು ಪೂರ್ತಿಯಾಗಿ ಅಳಿಸಿ ಹಾಕಿದರು (ಆದರೆ ಇದನ್ನು ಸ್ವಯಂಸೇವಕರಿಗೆ ಹೇಳಲಿಲ್ಲ). ಆ ವ್ಯಕ್ತಿಗಳು ಹೊರಗಿನಿಂದ ಬಂದ ಮೇಲೆ, ಜನರು ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದರು, ನನ್ನ ಗಾಯದ ಕಾರಣಕ್ಕೆ ನನ್ನನ್ನು ಕೆಟ್ಟದಾಗಿ ನಡೆಸಿಕೊಂಡರು ಎಂದು ದೂರು ಕೊಟ್ಟರು. ವಾಸ್ತವದಲ್ಲಿ ಅವರ ಮುಖದ ಮೇಲೆ ಯಾವುದೇ ಗಾಯವಿರಲಿಲ್ಲ!

ಇದನ್ನು ಸೆಲ್ಫ್-ಪರ್ಸೆಪ್ಷನ್ ಎನ್ನಲಾಗುತ್ತದೆ. ಅಂದರೆ, ನಮ್ಮಲ್ಲಿ ಕೀಳರಿಮೆ ಇದ್ದರೆ, ಜಗತ್ತು ನಮ್ಮನ್ನು ಹಾಗೆಯೇ ನೋಡುತ್ತಿದೆ ಎಂದು ನಾವು ಭ್ರಮಿಸುತ್ತೇವೆ. ಸಿನಿಮಾಗಳಲ್ಲಿ ಫೇಸ್ ಸ್ಕಾರ್ ಫೆಕ್ಟ್ ಅನ್ನು ಕೆಟ್ಟದಾಗಿ ಬಳಸಿಕೊಳ್ಳಲಾಗಿದೆ. ನೀವು ಗಮನಿಸಿರಬಹುದು, ಹೆಚ್ಚಿನ ಸಿನಿಮಾಗಳಲ್ಲಿ ವಿಲನ್‌ಗಳ ಮುಖದ ಮೇಲೆ ದೊಡ್ಡ ಗಾಯದ

> ❝ ಉದ್ಯೋಗ ಅಥವಾ ಸಾಮಾಜಿಕ ಸಂವಹನದಲ್ಲಿ, ಮುಖದ ಮೇಲೆ ಕಲೆ ಇರುವವರನ್ನು ಜನರು ಅರಿವಿಲ್ಲದೆಯೇ ಅಪರಾಧಿ ಮನೋಭಾವದವರು ಅಥವಾ ಕಡಿಮೆ ಸಮರ್ಥರು ಎಂದು ತಪ್ಪಾಗಿ ಭಾವಿಸಬಹುದು. ಮನೋವಿಜ್ಞಾನಿಗಳ ಪ್ರಕಾರ, ಮುಖದ ಮೇಲಿನ ಗಾಯದ ಗುರುತು ಕೇವಲ ಒಂದು ಚರ್ಮದ ಹಾನಿಯಲ್ಲ; ಅದು ಆ ವ್ಯಕ್ತಿಯ ಹಳೆಯ ಕಥೆಯನ್ನು ಹೇಳುತ್ತದೆ.

ಗುರುತಿರುತ್ತದೆ (ಉದಾಹರಣೆಗೆ: ಸ್ಕಾರ್ ಫೇಸ್, ದಿ ಲಯನ್ ಕಿಂಗ್‌ನಲ್ಲಿನ ಸ್ಕಾರ್). ಇದು ಜನರ ಮನಸ್ಸಿನಲ್ಲಿ, ಮುಖದ ಮೇಲೆ ಗಾಯವಿದ್ದರೆ ಅವರು ಅಪಾಯಕಾರಿ ಎಂಬ ತಪ್ಪು ಕಲ್ಪನೆಯನ್ನು ಬಿತ್ತಿದೆ.

ಇತ್ತೀಚಿನ ವರ್ಷಗಳಲ್ಲಿ, ಯುದ್ಧದ ಸಿನಿಮಾಗಳಲ್ಲಿ ಹೀರೋಗಳ ಮುಖದ ಮೇಲಿನ ಗಾಯವನ್ನು ತ್ಯಾಗ ಅಥವಾ ವೀರತ್ವದ ಸಂಕೇತವಾಗಿ ತೋರಿಸಲಾಗುತ್ತಿದೆ. ದುರದೃಷ್ಟ ವಶಾತ್, ನಿಜಜೀವನದಲ್ಲಿ ಇದು ಕೆಲವು ನಕಾರಾತ್ಮಕ ಪರಿಣಾಮಗಳನ್ನು ಬೀರಬಹುದು.

ಸಂದರ್ಶಕರು ಅರಿವಿಲ್ಲದೆಯೇ ಮುಖದ ಮೇಲೆ ಕಲೆ ಇರುವವರ ಬಗ್ಗೆ ಪೂರ್ವಗ್ರಹ ಪೀಡಿತರಾಗುವ ಸಾಧ್ಯತೆ ಇರುತ್ತದೆ. ವ್ಯಕ್ತಿಯು ತನ್ನ ಮುಖದ ಮೇಲಿನ ಸಣ್ಣ ಕಲೆಯನ್ನು ದೊಡ್ಡದಾಗಿ ಭಾವಿಸಿ ಸಾಮಾಜಿಕ ಜೀವನದಿಂದ ದೂರ ಸರಿಯಬಹುದು.

ಫೇಸ್ ಸ್ಕಾರ್ ಎಫೆಕ್ಟ್ ನಮಗೆ ಕಲಿಸುವ ದೊಡ್ಡ ಪಾಠವೆಂದರೆ- ನಮ್ಮ ಬಗ್ಗೆ ನಾವು ಏನು ಅಂದುಕೊಳ್ಳುತ್ತೇವೆಯೋ, ಅದು ಜಗತ್ತು ನಮ್ಮನ್ನು ನೋಡುವ ರೀತಿಯನ್ನು ನಿರ್ಧರಿಸುತ್ತದೆ. ಮುಖದ ಮೇಲಿನ ಗಾಯದ ಗುರುತು ನಿಮ್ಮ ಇತಿಹಾಸದ ಒಂದು ಭಾಗವಷ್ಟೇ, ಅದು ನಿಮ್ಮ ಭವಿಷ್ಯ ಅಥವಾ ಯೋಗ್ಯತೆಯನ್ನು ನಿರ್ಧರಿಸುವುದಿಲ್ಲ.

**- ವಿಶ್ವೇಶ್ವರ** ಭಟ್

**» ಹಿಂದಿ ವಿಷಯ ಮಾತ್ರವಲ್ಲ, ಅದರೊಟ್ಟಿಗೆ ಸಂಸ್ಕೃತ, ತುಳು, ಮರಾಠಿ, ಅರೇಬಿಕ್ ಸೇರಿದಂತೆ ಪಠ್ಯಕ್ರಮದಲ್ಲಿರುವ ಎಲ್ಲಾ ಭಾಷಾ ವಿಷಯಗಳಿಗೂ ಗ್ರೇಡ್ ನೀಡಲಾಗುತ್ತದೆ ಹಾಗೂ ಅವುಗಳ ಅಂಕವನ್ನು ಒಟ್ಟು ಅಂಕಗಳ ಜತೆಗೆ ಪರಿಗಣಿಸಲಾಗುವುದಿಲ್ಲ ಎಂದಿದ್ದಾರೆ ಸಚಿವರು. ಆದರೆ, ಇಲ್ಲೊಂದು ಗೊಂದಲವೂ ಇದೆ.**

# ವಿದ್ಯಾರ್ಥಿಗಳ ಪರಿಶ್ರಮಕ್ಕೆ ಬೆಲೆ ಇಲ್ಲವೇ?

ಒಡಲಾಳ ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮಾರ್ಚ್ 18ರಿಂದ ವಾರ್ಷಿಕ ಪರೀಕ್ಷೆಗಳು ಪ್ರಾರಂಭವಾಗಿವೆ. ಇನ್ನೇನು 3 ವಿಷಯಗಳ ಪರೀಕ್ಷೆಯನ್ನು ಬರೆದರೆ ಪರೀಕ್ಷಾ ಪ್ರಕ್ರಿಯೆಯೇ ಮುಗಿದು ಹೋಗುತ್ತಿತ್ತು. ಇಂಥ ಸಮಯದಲ್ಲಿ ಶಿಕ್ಷಣ ಸಚಿವರಿಂದ ದಿಢೀರ್ ಎಂದು ಹೊಮ್ಮಿದ ಘೋಷಣೆಯೊಂದು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರಲ್ಲಿ ಸಾಕಷ್ಟು ಗೊಂದಲವನ್ನೂ ನಿರಾಶೆಯನ್ನೂ ಹುಟ್ಟು ಹಾಕಿದೆ.

ಪರೀಕ್ಷಾ ಸಮಯದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ, ಪರೀಕ್ಷೆಯ ಮುಂದೂಡಿಕೆ, ಮೌಲ್ಯಮಾಪನ ಪ್ರಕ್ರಿಯೆಯ ಬದಲಾವಣೆ ಸೇರಿದಂತೆ ಹಲವು ಅನಗತ್ಯ ಸುಳ್ಳು ಸುದ್ದಿಗಳು ಹರಡುವುದು ಸಾಮಾನ್ಯ. ಇಂಥ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಶಿಕ್ಷಣ ಇಲಾಖೆಯದ್ದು.

ಆದರೆ, ಪ್ರಸ್ತುತ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಹಿಂದಿ ವಿಷಯದ ಪರೀಕ್ಷೆಗೆ 3 ದಿನ ಬಾಕಿ ಇರುವಾಗಲೇ ಈ ಪರೀಕ್ಷೆಗೆ ಮನ್ನಣೆ ಇಲ್ಲ ಎಂದು ಸ್ವತಃ ಶಿಕ್ಷಣ ಸಚಿವರೇ ಘೋಷಿಸಿದರು. ಇದು ತರವೇ? ಹಾಗೆ ನೋಡಿದರೆ, ಪರೀಕ್ಷಾ ನೀತಿಯಲ್ಲಿನ ಬದಲಾವಣೆಯ ಕುರಿತಂತೆ ಶಿಕ್ಷಣ ಸಚಿವರು ಶೈಕ್ಷಣಿಕ ವರ್ಷದ ಆರಂಭದಲ್ಲೇ ಆದೇಶವನ್ನು ಹೊರಡಿಸಬೇಕು. ಅದು ಸಾಧ್ಯವಾಗದಿದ್ದರೆ,

ಕೊನೆಯ ಪಕ್ಷ ಅಕ್ಟೋಬರ್ ತಿಂಗಳ ಅರ್ಧವಾರ್ಷಿಕ ಪರೀಕ್ಷೆಯ ಸಮಯದಲ್ಲಾದರೂ ಇಂಥ ಕ್ರಮಕ್ಕೆ ಮುಂದಾಗಿ ಎಲ್ಲ ತೆರನಾದ ಗೊಂದಲವನ್ನು ಪರಿಹರಿಸಬೇಕು. ಆದರೆ ಅದನ್ನು ಬಿಟ್ಟು, ಪರೀಕ್ಷೆ ನಡೆಯುತ್ತಿರುವಾಗಲೇ ಹೊಸ ನೀತಿಯನ್ನು ಘೋಷಿಸುವುದು ಮಕ್ಕಳ ಪರಿಶ್ರಮಕ್ಕೆ ಬಗೆದ ದ್ರೋಹವೆಂದರೆ ತಪ್ಪಾಗಲಾರದು.

ಏಕೆಂದರೆ, ಈಗಾಗಲೇ ಶಿಕ್ಷಕರು ವರ್ಷಪೂರ್ತಿ ಮಕ್ಕಳಿಗೆ ಪಾಠ ಮಾಡಿ ಪರೀಕ್ಷಾ ಸಿದ್ಧತೆಯನ್ನು ನಡೆಸಿರುತ್ತಾರೆ. ಒಂದಲ್ಲ ಎರಡಲ್ಲ ಮೂರು ಪೂರ್ವಸಿದ್ಧತಾ ಪರೀಕ್ಷೆಗಳನ್ನು ಮಾಡಲಾಗಿರುತ್ತದೆ. ಆದರೀಗ, ಹಿಂದಿ ಪರೀಕ್ಷೆಯ ಅಂಕಗಳನ್ನು ಗ್ರೇಡ್ ಆಗಿ ಪರಿಗಣಿಸಲಾಗುತ್ತದೆ ಹಾಗೂ ಇದಕ್ಕೆ ನಿಗದಿಯಾಗಿದ್ದ 100 ಅಂಕಗಳನ್ನು ಹೊರತುಪಡಿಸಿ, 625ಕ್ಕೆ ಬದಲಾಗಿ 525 ಅಂಕಗಳಿಗೆ ಮಾತ್ರ ಮೌಲ್ಯಾಂಕ ನೀಡಲಾಗುತ್ತದೆ ಎಂದು ಘೋಷಣೆಯಾಗಿದೆ. ಇದರರ್ಥ, ಇನ್ನು ಮುಂದೆ ಹಿಂದಿ ವಿಷಯವು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ!

ಹಿಂದಿ ವಿಷಯ ಮಾತ್ರವಲ್ಲ, ಅದರೊಟ್ಟಿಗೆ ಸಂಸ್ಕೃತ, ತುಳು, ಮರಾಠಿ, ಅರೇಬಿಕ್ ಸೇರಿದಂತೆ ಪಠ್ಯಕ್ರಮದಲ್ಲಿರುವ ಎಲ್ಲಾ ಭಾಷಾ ವಿಷಯಗಳಿಗೂ ಗ್ರೇಡ್ ನೀಡಲಾಗುತ್ತದೆ ಹಾಗೂ ಅವುಗಳ ಅಂಕವನ್ನು ಒಟ್ಟು ಅಂಕಗಳ ಜತೆಗೆ ಪರಿಗಣಿಸಲಾಗುವುದಿಲ್ಲ ಎಂದಿದ್ದಾರೆ ಸಚಿವರು. ಆದರೆ, ಇಲ್ಲೊಂದು ಗೊಂದಲವೂ ಇದೆ.

ತೃತೀಯ ಐಚ್ಛಿಕ ವಿಷಯದಲ್ಲಿ ಕನ್ನಡವೂ ಒಂದಾಗಿದ್ದು, ವಿದ್ಯಾರ್ಥಿಗಳು ಒಂದೊಮ್ಮೆ ಕನ್ನಡವನ್ನು ತೃತೀಯ ಭಾಷೆಯನ್ನಾಗಿ ಆಯ್ಕೆಮಾಡಿಕೊಂಡರೆ ಅವರಿಗೂ ಇದೇ ನಿಯಮ ಅನ್ವಯವಾಗುತ್ತದೆಯೇ ಎಂಬುದರ ಬಗ್ಗೆ ಸ್ಪಷ್ಟೀಕರಣವಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಇಂಥದೊಂದು ಮಹತ್ವದ ನಿರ್ಣಯವನ್ನು ಕೈಗೊಳ್ಳಲು ಇದು ಸಕಾಲವಾಗಿರಲಿಲ್ಲ ಮತ್ತು ಪರೀಕ್ಷೆಯು ನಡೆಯುತ್ತಿರುವಾಗಲೇ ಅದನ್ನು ಕೈಗೊಳ್ಳುವ ಮನಸ್ಥಿತಿಯೂ ಸರಿಯಲ್ಲ. ಇದಕ್ಕೆ ಬದಲಾಗಿ, ಶಿಕ್ಷಣ ತಜ್ಞರು, ಶಿಕ್ಷಣ ಸಂಸ್ಥೆಗಳು, ಪಾಲಕರು ಹಾಗೂ ಪ್ರತಿಪಕ್ಷಗಳು ಹೀಗೆ ಎಲ್ಲರೊಂದಿಗೆ ಚರ್ಚಿಸಿ, ಎಲ್ಲಿಯೂ ಗೊಂದಲಕ್ಕೆ ಅವಕಾಶವಿಲ್ಲದಂತೆ ಸುತ್ತೋಲೆಯನ್ನು ಹೊರಡಿಸಬೇಕಿತ್ತು.

ಆದರೆ ಶಿಕ್ಷಣ ಸಚಿವರು ಹಾಗೆ ಮಾಡದೆ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ. ಇದರಿಂದಾಗಿ, ಯಾವ ಅಂಕ ಬಂದರೆ ಯಾವ ಗ್ರೇಡ್ ನೀಡಬೇಕು? ಒಂದೊಮ್ಮೆ ವಿದ್ಯಾರ್ಥಿಗಳು ಹಿಂದಿ ಅಥವಾ ಮತ್ತಾವುದೇ ತೃತೀಯ ಐಚ್ಛಿಕ ಭಾಷಾ ವಿಷಯದ ಪರೀಕ್ಷೆಗೆ ಗೈರಾದರೆ ಅವರಿಗೆ ಗ್ರೇಡ್ ನೀಡಬೇಕೇ? ಗ್ರೇಡ್ ಸುಧಾರಿಸಲು ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ಬರೆಯಲು ಅವಕಾಶವಿದೆಯೇ? ಎಂಬ ಗೊಂದಲಗಳು ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನೂ ಕಾಡುತ್ತಿದೆ.

ಗ್ರೇಡ್ ಇರುವುದರಿಂದ, ಒಟ್ಟು 525 ಅಂಕಗಳಿಗೆ ಪ್ರತಿಯಾಗಿ ವಿದ್ಯಾರ್ಥಿಯು ಪಡೆದ ಅಂಕಗಳಿಗೆ ಶೇಕಡಾವಾರು ಫಲಿತಾಂಶ, ರ್‍ಯಾಂಕ್ ನೀಡುವುದರಿಂದ ಮುಂಬರುವ ಶೈಕ್ಷಣಿಕ ವರ್ಷದಿಂದ ಹಿಂದಿ ವಿಷಯವನ್ನು ವಿದ್ಯಾರ್ಥಿಗಳು ಏಕೆ ಕಲಿಯಬೇಕು? ಇಂಥ ಅವೈಜ್ಞಾನಿಕ ನೀತಿಯಿಂದ ಮುಂಬರುವ ದಿನಗಳಲ್ಲಿ ತೃತೀಯ ಐಚ್ಛಿಕ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಅಧ್ಯಯನ ಮಾಡಲು ಆಸಕ್ತಿಯನ್ನು ತಳೆಯುವುದಾದರೂ ಹೇಗೆ? ಹಿಂದಿ ಶಿಕ್ಷಕರ ಕಥೆಯೇನು? ಇಂಥ ಹತ್ತಾರು ಪ್ರಶ್ನೆಗಳು ಎಲ್ಲರನ್ನೂ ಕಾಡುತ್ತಿವೆ.

ಈ ಯಾವುದಕ್ಕೂ ಶಿಕ್ಷಣ ಇಲಾಖೆಯ ಬಳಿ ಸದ್ಯಕ್ಕೆ ಉತ್ತರವಿದ್ದಂತಿಲ್ಲ. ಇದನ್ನೆಲ್ಲಾ ನೋಡುತ್ತಿದ್ದರೆ, ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿಸಲು ಮುಂದಾದರಂತೆ ಎಂಬ ಗಾದೆ ಮಾತು ನೆನಪಾಗುತ್ತದೆ. ಸಂಕಷ್ಟವನ್ನು ಮೈಮೇಲೆ ಎಳೆದುಕೊಂಡು, ನಂತರ ಅಪಾಯದ ಅರಿವಾಗಿ ಪರಿಹಾರವನ್ನು ಹುಡುಕುವ ಯತ್ನವೇಕೆ? ಇಂಥ ಕ್ರಮಗಳಿಂದ ಯಾವುದೇ ಪ್ರಯೋಜನವಿಲ್ಲ. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿ ಅವರನ್ನು ಆತ್ಮನಿರ್ಭರರನ್ನಾಗಿಸಬೇಕಾದವರೇ ನಿರ್ಲಕ್ಷ್ಯದಿಂದ ವರ್ತಿಸಿ, ಸೂಕ್ತ ಯೋಜನೆಯಿಲ್ಲದೆ, ಶೈಕ್ಷಣಿಕ ಕ್ಯಾಲೆಂಡರ್ ಅನ್ನು ಕಟ್ಟುನಿಟ್ಟಾಗಿ ಪಾಲಿಸದೆ ಯಾವುದೋ ಪ್ರಭಾವಕ್ಕೊಳಗಾಗಿ ಅದನ್ನು ಮನಬಂದಂತೆ ಬದಲಾಯಿಸಿದರೆ ಯಾರನ್ನು ದೂರಬೇಕು? ತಿರುವಿನ ಘಟ್ಟ ಎಂದೇ ಕರೆಸಿಕೊಳ್ಳುವ ಎಸ್‌ಎಸ್‌ಎಲ್ ಸಿಯಂಥ ಪರೀಕ್ಷೆಯ ನಿರ್ವಹಣೆಯು ಹುಡುಗಾಟಿಕೆಯ ಬಾಬತ್ತಾಗಬಾರದು; ಇಂಥ ವೇಳೆ ವಿದ್ಯಾರ್ಥಿಗಳ ಮನಸ್ಥಿತಿ ಅದೆಷ್ಟು ಸೂಕ್ಷ್ಮವಾಗಿರುತ್ತದೆ ಎಂಬುದನ್ನು ಸಂಬಂಧಪಟ್ಟವರು ಅರಿತಿರಬೇಕು.

ಆದರೆ ಈಗ ಹೊಮ್ಮಿರುವಂಥ ಘೋಷಣೆಯಿಂದಾಗಿಯೇ ರಾಜ್ಯದ ಶಿಕ್ಷಣ ಇಲಾಖೆಯು ಪಾಲಕರ ಭರವಸೆಯನ್ನು ಕಳೆದುಕೊಳ್ಳುತ್ತಿದೆ ಹಾಗೂ ಸಿಬಿಎಸ್‌ಇ ಪಠ್ಯಕ್ರಮವಿರುವ ಶಾಲೆಗೆ ಮಕ್ಕಳನ್ನು ಸೇರಿಸಲು ಅವರು ಒಲವು ತೋರುವಂತಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅದರದ್ದೇ ಆದ ಒಂದು ಘನತೆಯಿದೆ; ಆದರೆ ಸರಕಾರ/ಶಿಕ್ಷಣ ಇಲಾಖೆ ಅದನ್ನು ತಗ್ಗಿಸುವ ಯತ್ನದಲ್ಲಿರುವುದು ಬೇಸರದ ಸಂಗತಿ.

ಇಂಥ ದಿಢೀರ್ ನಿರ್ಧಾರದಿಂದ ಪ್ರಯೋಜನವೇನು? ಇದರಿಂದಾಗಿ ಮಕ್ಕಳ ವರ್ಷ ಪೂರ್ತಿಯ ಪರಿಶ್ರಮವು ನೀರಲ್ಲಿ ಹೋಮ ಮಾಡಿದಂತಾಗದೇ? ಹಿಂದಿ ವಿಷಯವನ್ನು ತಾವು ಕಲಿಯಬೇಕೇ ಬೇಡವೇ ಎಂದು ನಿರ್ಧರಿಸುವ ಹಕ್ಕು ಮಕ್ಕಳಿಗಿಲ್ಲವೇ? ಇದು ಮಕ್ಕಳ ಶೈಕ್ಷಣಿಕ ಹಕ್ಕಿಗೆ ಧಕ್ಕೆ ತರುವುದಿಲ್ಲವೇ? ರಾಜ್ಯದಲ್ಲಿ ದ್ವಿಭಾಷಾ ಶಿಕ್ಷಣ ನೀತಿ ಇರಬೇಕು ಎಂದಾದರೆ, ಇರಲಿ.

ಆದರೆ, ಯಾರೆಲ್ಲಾ ವಿದ್ಯಾರ್ಥಿಗಳಿಗೆ ಹಿಂದಿ ಸೇರಿದಂತೆ, ತೃತೀಯ ಐಚ್ಛಿಕ ಭಾಷೆಯ ವ್ಯಾಪ್ತಿಗೆ ಬರುವಂಥವನ್ನು ಕಡ್ಡಾಯ ವಿಷಯದ ಬದಲಾಗಿ ಐಚ್ಛಿಕ ಆಯ್ಕೆಯಾಗಿ ಕಲಿಯಲು ಅವಕಾಶ ನೀಡಬೇಕು. ಕೇವಲ ಹಿಂದಿಯ ಮೇಲೆ ಈ ಕ್ರಮವೇಕೆ? ಹಾಗೆ ನೋಡಿದರೆ, ಇಂಗ್ಲಿಷ್ ಕೂಡ ನಮ್ಮ ಕನ್ನಡ ಭಾಷೆಯ ಮೇಲೆ ಪ್ರಭಾವ ಬೀರುತ್ತಿದೆ.

ಎಲ್ಲಾ ಕಡೆ ವ್ಯವಹಾರ ಭಾಷೆಯಾಗಿ ಇಂಗ್ಲಿಷ್ ಬಳಕೆಯೇ ಹೆಚ್ಚು. ಕೇವಲ ಕನ್ನಡ ಭಾಷೆಯೇ ಮುಖ್ಯ ಎಂದು ಪರಿಗಣಿಸುವುದಾದರೆ, ಇನ್ನು ಮುಂದೆ ಕನ್ನಡವನ್ನು ಕಡ್ಡಾಯಗೊಳಿಸಿ ಉಳಿದವನ್ನು ಐಚ್ಛಿಕ ಆಯ್ಕೆಯ ವಿಷಯವನ್ನಾಗಿಸುವುದೇ ಒಳಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪ್ರಾರಂಭವಾದ ಮೇಲೆ ಹಾಗೂ ಆ ಪೈಕಿ ಕೆಲವು ವಿಷಯದ ಪರೀಕ್ಷೆ ಮುಗಿದ ನಂತರ, ಹೀಗೆ ದಿಢೀರನೆ ಒಟ್ಟು ಅಂಕಗಳನ್ನು 625ರಿಂದ 525ಕ್ಕೆ ಇಳಿಸಲಾಗುವುದು ಎಂದು ಘೋಷಿಸುವುದು ತರವಲ್ಲ.

ಸಂಬಂಧಪಟ್ಟವರಿಗೆ ಸದರಿ ಪರೀಕ್ಷೆಗಿರುವ ಮಹತ್ವದ ಕುರಿತು ಅರಿವಿಲ್ಲ ಎಂಬುದನ್ನೂ, ಅವರ ಬೇಜವಾಬ್ದಾರಿತನವನ್ನೂ ಇಂಥ ನಡೆಯು ತೋರಿಸುತ್ತದೆ. ವಾರ್ಷಿಕ ಪರೀಕ್ಷೆ ಎಂಬುದು ವಿದ್ಯಾರ್ಥಿಗಳ ಪರಿಶ್ರಮ ಮತ್ತು ಸಮಾಜದ ನಂಬಿಕೆಯ ಸಂಕೇತ. ಇದನ್ನು ನಿರ್ಲಕ್ಷಿಸುವುದು, ತುಳಿಯುವುದು ವಿಷಾದನೀಯ ವರ್ತನೆ ಎನಿಸಿಕೊಳ್ಳುತ್ತದೆ.

ರಾಜಕೀಯ ಪ್ರಯೋಗಗಳಿಗೆ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವ ಯಾವ ಹಕ್ಕೂ ಇಂಥವರಿಗಿಲ್ಲ. ವರ್ಷಪೂರ್ತಿ ಓದಿದ ವಿಷಯವನ್ನು ವಾರ್ಷಿಕ ಪರೀಕ್ಷೆಯ ಮಧ್ಯದಲ್ಲೇ ಅಪ್ರಸ್ತುತ ಎಂದು ಘೋಷಿಸುವುದು ಆಳುಗರ ದೌರ್ಬಲ್ಯವಷ್ಟೇ ಅಲ್ಲ, ಅದು ವಿದ್ಯಾರ್ಥಿಗಳ ಭವಿಷ್ಯವನ್ನು ತಮಾಷೆಯ ವಿಷಯವಾಗಿ ಪರಿಗಣಿಸುವ ಅಪಾಯಕಾರಿ ಮನೋಭಾವದ ದ್ಯೋತಕವೂ ಆಗಿದೆ.

ಈ ತೀರ್ಮಾನದಲ್ಲಿ ಯಾವುದೇ ಶೈಕ್ಷಣಿಕ ದೃಷ್ಟಿಕೋನವಿಲ್ಲ, ಇದು ಸಂಪೂರ್ಣವಾಗಿ ರಾಜಕೀಯ ಪ್ರೇರಿತ, ಅಸ್ಥಿರ ಆಡಳಿತದ ಪ್ರತೀಕ. ಶಿಕ್ಷಣ ವ್ಯವಸ್ಥೆಯನ್ನು ಹೀಗೆ ಅಸ್ಥಿರ ಗೊಳಿಸುವುದು ವಿದ್ಯಾರ್ಥಿಗಳಲ್ಲಿ ಅಪನಂಬಿಕೆ ಮತ್ತು ಆತಂಕವನ್ನು ಹೆಚ್ಚಿಸುವುದರ ಜತೆಗೆ, ಅದು ರಾಜ್ಯದ ಶೈಕ್ಷಣಿಕ ಮಾನದಂಡಗಳನ್ನೇ ಹಾಳು ಮಾಡುವ ಕೆಲಸವಾಗಿ ಬಿಡುತ್ತದೆ.

ಶಿಕ್ಷಣ ಸಚಿವರ ಇಂಥ ನಿರ್ಧಾರದಿಂದಾಗಿ ಇನ್ನು ಮುಂದೆ ಹಿಂದಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು ತಪ್ಪಿತು, ಇದರಿಂದಾಗಿ ಕೋಟ್ಯಂತರ ರುಪಾಯಿ ವೆಚ್ಚವು ಉಳಿಯಿತು. ಈಗಾಗಲೇ ಇರುವ ಹಿಂದಿ ಶಿಕ್ಷಕರಿಗೆ ಬೇರೆ ವಿಷಯವನ್ನು ಪಾಠ ಮಾಡಲು ವಹಿಸಿ, ಪ್ರಸ್ತುತ ಇರುವ ಶಿಕ್ಷಕರ ಕೊರತೆಯನ್ನು ಸರಿದೂಗಿಸಲು ಅವಕಾಶ ಸಿಕ್ಕಂತಾಯಿತು. ಆದರೆ ಮಕ್ಕಳಿಗೆ ಸಿಗಬೇಕಾದ ನ್ಯಾಯ ಸಿಗಲಿಲ್ಲ, ಶಿಕ್ಷಣ ವ್ಯವಸ್ಥೆಯ ಮೇಲಿದ್ದ ನಂಬಿಕೆ ಹಾಳಾಯಿತು.

ಒಟ್ಟಿನಲ್ಲಿ, ದ್ವಿಭಾಷಾ ಹಾಗೂ ತ್ರಿಭಾಷಾ ಸೂತ್ರಗಳ ಜಗಳದಲ್ಲಿ ಮಕ್ಕಳ ಜೀವನ ಮಾತ್ರ ಸೂತ್ರವಿಲ್ಲದ ಗಾಳಿಪಟದಂತಾಯಿತು. ಇದು ವ್ಯವಸ್ಥೆಯ ದೌರ್ಭಾಗ್ಯವಲ್ಲದೆ ಮತ್ತೇನು?!

**- ಸುರೇಂದ್ರ ಪೈ,** ಭಟ್ಕಳ

## ಕಲಿಯಲು ಅವಕಾಶ ನೀಡಬೇಕು....



- ಐಚ್ಛಿಕ ಭಾಷೆಯ ವ್ಯಾಪ್ತಿಗೆ ಬರುವಂಥವನ್ನು ಕಡ್ಡಾಯ ವಿಷಯದ ಬದಲಾಗಿ ಐಚ್ಛಿಕ ಆಯ್ಕೆಯಾಗಿ ಕಲಿಯಲು ಅವಕಾಶ ನೀಡಬೇಕು.
- ಕೇವಲ ಹಿಂದಿಯ ಮೇಲೆ ಈ ಕ್ರಮವೇಕೆ?
- ಹಾಗೆ ನೋಡಿದರೆ, ಇಂಗ್ಲಿಷ್ ಕೂಡ ನಮ್ಮ ಕನ್ನಡ ಭಾಷೆಯ ಮೇಲೆ ಪ್ರಭಾವ ಬೀರುತ್ತಿದೆ.
- ಎಲ್ಲಾ ಕಡೆ ವ್ಯವಹಾರ ಭಾಷೆಯಾಗಿ ಇಂಗ್ಲಿಷ್ ಬಳಕೆಯೇ ಹೆಚ್ಚು.
- ಕೇವಲ ಕನ್ನಡ ಭಾಷೆಯೇ ಮುಖ್ಯ ಎಂದು ಪರಿಗಣಿಸುವುದಾದರೆ, ಇನ್ನು ಮುಂದೆ ಕನ್ನಡವನ್ನು ಕಡ್ಡಾಯಗೊಳಿಸಿ ಉಳಿದವನ್ನು ಐಚ್ಛಿಕ ಆಯ್ಕೆಯ ವಿಷಯವನ್ನಾಗಿಸುವುದೇ ಒಳಿತು.
- ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪ್ರಾರಂಭವಾದ ಮೇಲೆ ಹಾಗೂ ಆ ಪೈಕಿ ಕೆಲವು ವಿಷಯದ ಪರೀಕ್ಷೆ ಮುಗಿದ ನಂತರ, ಹೀಗೆ ದಿಢೀರನೆ ಒಟ್ಟು ಅಂಕಗಳನ್ನು 625ರಿಂದ 525ಕ್ಕೆ ಇಳಿಸಲಾಗುವುದು ಎಂದು ಘೋಷಿಸುವುದು ತರವಲ್ಲ.
- ಸಂಬಂಧಪಟ್ಟವರಿಗೆ ಸದರಿ ಪರೀಕ್ಷೆಗಿರುವ ಮಹತ್ವದ ಕುರಿತು ಅರಿವಿಲ್ಲ ಎಂಬುದನ್ನೂ, ಅವರ ಬೇಜವಾಬ್ದಾರಿತನವನ್ನೂ ಇಂಥ ನಡೆಯು ತೋರಿಸುತ್ತದೆ.
- ವಾರ್ಷಿಕ ಪರೀಕ್ಷೆ ಎಂಬುದು ವಿದ್ಯಾರ್ಥಿಗಳ ಪರಿಶ್ರಮ ಮತ್ತು ಸಮಾಜದ ನಂಬಿಕೆಯ ಸಂಕೇತ.
- ಇದನ್ನು ನಿರ್ಲಕ್ಷಿಸುವುದು, ತುಳಿಯುವುದು ವಿಷಾದನೀಯ ವರ್ತನೆ ಎನಿಸಿಕೊಳ್ಳುತ್ತದೆ.
- ರಾಜಕೀಯ ಪ್ರಯೋಗಗಳಿಗೆ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವ ಯಾವ ಹಕ್ಕೂ ಇಂಥವರಿಗಿಲ್ಲ.
- ವರ್ಷಪೂರ್ತಿ ಓದಿದ ವಿಷಯವನ್ನು ವಾರ್ಷಿಕ ಪರೀಕ್ಷೆಯ ಮಧ್ಯದಲ್ಲೇ ಅಪ್ರಸ್ತುತ ಎಂದು ಘೋಷಿಸುವುದು ಆಳುಗರ ದೌರ್ಬಲ್ಯವಷ್ಟೇ ಅಲ್ಲ, ಅದು ವಿದ್ಯಾರ್ಥಿಗಳ ಭವಿಷ್ಯವನ್ನು ತಮಾಷೆಯ ವಿಷಯವಾಗಿ ಪರಿಗಣಿಸುವ ಅಪಾಯಕಾರಿ ಮನೋಭಾವದ ದ್ಯೋತಕವೂ ಆಗಿದೆ.

# ವಸತಿ ರಹಿತ ಫಲಾನುಭವಿಗಳಿಗೆ ಮನೆಗಳ ವಿತರಣೆ

## ನೂತನ ಮನೆಗಳ ಕೀ ವಿತರಿಸುವ ಮೂಲಕ ಬಡವರ ಕನಸು ನನಸು | ಶುಭ ಹಾರೈಸಿದ ಶಾಸಕ ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ

**ಅರಸೀಕೆರೆ:** ನಗರದಲ್ಲಿ ದಶಕಗಳಿಂದ ಸ್ವಂತ ಸೂರು ಹೊಂದಿಸಿ ಕೊಳ್ಳಬೇಕೆಂಬ ಕನಸು ಕಾಣುತ್ತಾ ಬಂದಿದ್ದ, ನಿರಾಶ್ರಿತರು ಹಾಗೂ ಬಡವರ ಕನಸು ಕಡೆಗೂ ಸಾಕಾರ ರೂಪ ಪಡೆದಿದ್ದು, ಸೋಮವಾರ ನಗರ ವ್ಯಾಪ್ತಿಯ ವಸತಿ ರಹಿತ ಫಲಾನುಭವಿಗಳಿಗೆ ಗೃಹ ನಿರ್ಮಾಣ ಮಂಡಳಿ ಅಧ್ಯಕ್ಷರೂ ಆದ ಶಾಸಕ ಕೆ.ಎಂ.ಶಿವಲಿಂಗೇಗೌಡ ನೂತನ ಮನೆಗಳ ಕೀ ವಿತರಿಸುವ ಮೂಲಕ ಶುಭ ಹಾರೈಸಿ, ಬಡವರ ಕನಸನ್ನು ನನಸು ಮಾಡಿದರು.

ಹೌಸಿಂಗ್ ಫಾರ್ ಆಲ್ ಯೋಜನೆಯಡಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಜೊತೆಗೆ ಫಲಾನುಭವಿಯಿಂದ 1 ಲಕ್ಷ ಸ್ವೀಕರಿಸಿ, ನಗರದ ಸುಬ್ರಹ್ಮಣ್ಯ ಬೆಟ್ಟದ ತಪ್ಪಲಿನಲ್ಲಿ 1181 ಮನೆಗಳನ್ನು ನಿರ್ಮಿಸುತ್ತಿದ್ದು, ಈ ಪೈಕಿ ಮೊದಲ ಹಂತದಲ್ಲಿ ಕಾಮಗಾರಿ ಪೂರ್ಣಗೊಂಡಿರುವ 350 ಮನೆಗಳಲ್ಲಿ, 231 ಫಲಾನುಭವಿಗಳಿಗೆ ಲಾಟರಿ ಮೂಲಕ ಮನೆಗಳನ್ನು ಶಾಸಕರು ಹಂಚಿಕೆ ಮಾಡಿದರು.

ನಂತರ ಅವರು ಮಾತನಾಡಿ, ನಗರಕ್ಕೆ ನೂರಾರು ವರ್ಷಗಳ ಇತಿಹಾಸವಿದ್ದು, ಕೆಲವು ಕುಟುಂಬಗಳು ನಗರದಲ್ಲಿ ಮನೆ ನಿರ್ಮಿಸಿಕೊಳ್ಳಬೇಕೆಂಬ ನನಸಾಗದೇ ದಿನ ದೂಡುತ್ತಾ ಬಂದಿದ್ದರು. ಇಂತಹ ನಿರಾಶ್ರಿತರಿಗೆ ಸ್ವಂತ ಸೂರು ಕಲ್ಪಿಸಿಕೊಡಬೇಕೆಂಬ ಮಹದಾಸೆಯಿಂದ ನಾನು ಹೌಸಿಂಗ್ ಫಾರ್ ಆಲ್ ಯೋಜನೆಯನ್ನು ಕ್ಷೇತ್ರಕ್ಕೆ ಮಂಜೂರು ಮಾಡಿಸಿಕೊಂಡು ಬಂದು ಸುಬ್ರಹ್ಮಣ್ಯ ಬೆಟ್ಟದ ತಪ್ಪಲಿನ ಜಾಗ ಗೊತ್ತುಪಡಿಸಲಾಯಿತು. ರಾಜ್ಯ ಸರ್ಕಾರದಿಂದ ಎರಡೂವರೆ ಲಕ್ಷ, ಕೇಂದ್ರದಿಂದ ಒಂದೂವರೆ ಲಕ್ಷ ಹಾಗೂ ಫಲಾನುಭವಿಯಿಂದ 1 ಲಕ್ಷ ರೂ. ಪಡೆದು ಸುಸಜ್ಜಿತ ಮನೆಗಳನ್ನು ನಿರ್ಮಿಸಿಕೊಡಲಾಗಿದೆ. ಫಲಾನುಭವಿಗಳು ಇನ್ನು ಮುಂದೆ ಈ ನೂತನ ಮನೆಗಳಿಗೆ ನೀವೇ ಮಾಲೀಕರಾಗುತ್ತಿದ್ದು, ಮುಂದಿನ ನಿಮ್ಮ ಕುಟುಂಬದ ಜೀವನ ಸುಖಮಯವಾಗಿರಲಿ ಎಂದು ಆಶಿಸಿದರು.

**ಲೋಪವಿಲ್ಲ:** ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮಾಡಲಾಗಿದೆ. ಸ್ಥಳೀಯ ಚುನಾಯಿತ ನಗರಸಭೆ ಸದಸ್ಯರನ್ನು ಒಡಗೂಡಿ, ವಾರ್ಡ್‌ವಾರು ಸಭೆ ನಡೆಸಿ ವಸತಿ ರಹಿತ ಅರ್ಹ ಫಲಾನುಭವಿಗಳನ್ನು ಸಾರ್ವಜನಿಕರ ಸಮ್ಮುಖದಲ್ಲಿ ಆಯ್ಕೆ ಮಾಡಿ, ಅರ್ಹರ ಪಟ್ಟಿ ಸಿದ್ಧಪಡಿಸಲಾಗಿದೆ. ಯಾವುದೇ ಜಾತಿ, ಧರ್ಮ ನೋಡದೆ ಅರ್ಹರಿಗಷ್ಟೇ ಮನೆಗಳನ್ನು ವಿತರಿಸಲಾಗುತ್ತಿದ್ದು, ಇದಕ್ಕೆ ರಾಜಕೀಯ ಬಣ್ಣ ಕಟ್ಟುವುದಾಗಲೀ, ಅನವಶ್ಯಕ ಟೀಕೆ-ಟಿಪ್ಪಣಿ ಮಾಡುವುದನ್ನು ಸಹಿಸುವುದಿಲ್ಲ ಎಂದು ಇದೇ ಸಂದರ್ಭದಲ್ಲಿ ಖಡಕ್ ಎಚ್ಚರಿಕೆ ಸಹ ನೀಡಿದರು.

ನಗರಸಭೆ ನಿಕಟಪೂರ್ವ ಅಧ್ಯಕ್ಷ ಎಂ. ಸಮೀವುಲ್ಲಾ ಮಾತನಾಡಿ, ಬಡವರ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಶಾಸಕರು, ಎಲ್ಲರಿಗೂ ಮನೆ ಯೋಜನೆಯಂತಹ ಒಂದು ಬೃಹತ್ ಯೋಜನೆಯನ್ನು ತಾಲೂಕಿಗೆ ತಂದು ಸಾವಿರಾರು ವಸತಿ ರಹಿತ ಕುಟುಂಬಗಳಿಗೆ ಅನುಕೂಲ ಜೊತೆಗೆ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಶಾಸಕರ ಈ ಜನಪರ ಕಾಳಜಿ ಎಲ್ಲರಿಗೂ ಆದರ್ಶವಾಗಿದೆ ಎಂದರು.

ಈ ನೂತನ ಬಡಾವಣೆಯು ಸಕಲ ಮೂಲಭೂತ ಸೌಕರ್ಯಗಳಿಂದ ಕೂಡಿದ್ದು, ಫಲಾನಭವಿಗಳು ಸಾಮರಸ್ಯದಿಂದ ಇಲ್ಲಿ ತಮ್ಮ ಬದುಕು ಕಟ್ಟಿಕೊಳ್ಳಿ ಎಂದು ಶಿವಲಿಂಗೇಗೌಡ ಅವರು ಶುಭ ಹಾರೈಸಿದರು.

ಫಲಾನುಭವಿಗಳೇ ತಮ್ಮ ಅದೃಷ್ಟದ ಮನೆಗಳನ್ನು ತಮ್ಮ ಅಮೃತ ಹಸ್ತದಿಂದ ತಾವೇ ಲಾಟರಿ ಮೂಲಕ ಆಯ್ದುಕೊಂಡಿದ್ದು ಸಹಜವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಸಮಾರಂಭದಲ್ಲಿ ನಗರ ಯೋಜನಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್, ತಾ.ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್, ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ಮಾಜಿ ಸದಸ್ಯರಾದ ಜಿ.ಟಿ.ಗಣೇಶ್, ದರ್ಶನ್, ಯುವರಾಜ್, ಮೇಲುಗಿರಿಗೌಡ, ಆಶ್ರಯ ಸಮಿತಿ ಸದಸ್ಯರಾದ ಶ್ರೀನಿವಾಸ್, ಮಹಮದ್ ಪಾಷ, ಅಣ್ಣಾದೊರೆ ಮೊದಲಾದವರಿದ್ದರು.

## ಮಹಾವೀರರ ತತ್ವಾದರ್ಶ ವಿಶ್ವಕ್ಕೆ ಮಾರ್ಗದರ್ಶಿ

• ಪ್ರಜೋದಯ ವರದಿ

**ಅರಕಲಗೂಡು:** ಅಹಿಂಸೆಯೆ ಪರಮ ಧರ್ಮ ಎಂದು ಸಾರಿದ ಭಗವಾನ್ ಮಹಾವೀರರ ತತ್ವ, ಆದರ್ಶಗಳು ವಿಶ್ವಕ್ಕೆ ಮಾರ್ಗದರ್ಶಿಯಾಗಿದೆ ಎಂದು ತಹಶೀಲ್ದಾರ್ ಕೆ.ಸಿ.ಸೌಮ್ಯ ತಿಳಿಸಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಮಹಾವೀರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮನುಷ್ಯ, ಪ್ರಾಣಿ ಸೇರಿದಂತೆ ಜಗತ್ತಿನ ಯಾವುದೇ ಜೀವಿಯನ್ನೂ ನೋಯಿಸಬಾರದು ಎಂಬ ಇವರ ಆದರ್ಶ ಎಲ್ಲ ಕಾಲಕ್ಕೂ ಸಲ್ಲುವಂತಹದ್ದು, ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಯುದ್ಧ, ಹಿಂಸಾಚಾರಗಳಿಂದ ವಿಶ್ವ ತಲ್ಲಣಿಸುತ್ತಿದ್ದು ಮಹಾವೀರರ ತತ್ವಗಳು ಎಲ್ಲರ ಹೃದಯದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿ ಕಣ್ಣು ತೆರೆಸುವಂತಾಗಲಿ ಎಂದರು.

ಜೈನ ಸಂಘದ ಅಧ್ಯಕ್ಷ ರಾಜೇಂದ್ರ ಕುಮಾರ್ ಜೈನ್, ಮಹಾವೀರ ಜೈನ್, ನವರತ್ನ ಜೈನ್, ಪಪಂ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್, ಸಿಡಿಪಿಒ ವೆಂಕಟೇಶ್, ಶಿರಸ್ತೆದಾರ್ ಸೋಮಶೇಖರ್, ಕಂದಾಯ ನಿರೀಕ್ಷಕ ಲೋಕೇಶ್, ಇಂದ್ರಜೈನ್, ರಾಜೇಂದ್ರಜೈನ್, ಅಶಿಸ್, ಕಿಶನ್ ಲಾಲ್, ಭುರಾರಾಮ್, ಅಮುಲಕ್ ಚಂದ್, ಶ್ರವಣ್, ಸಂದೀಪ್ ಜೈನ್ ಉಪಸ್ಥಿತರಿದ್ದರು.

## ಜಾವೆಲಿನ್‌ನಲ್ಲಿ ಚಿನ್ನದ ಪದಕ

**ಆಲೂರು:** ಪಾಳ್ಯ ಹೋಬಳಿ ತೊರಳ್ಳಿ ಗ್ರಾಮದ ಕೃಷಿಕ ಟಿ.ಎಸ್. ರವಿಕುಮಾರ್ ಅವರ ಪುತ್ರ, ಹಾಸನದ ಆಚಾರ್ಯ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಆರ್. ಪ್ರೀತಮ್ ಅವರು ಇತ್ತೀಚೆಗೆ ನೇಪಾಳ ದೇಶ ಪೊಖರಾದಲ್ಲಿ ನಡೆದ ಯೂತ್ ಗೇಮ್ಸ್ ಇಂಡೋನೇಷ್ಯಾ ಇಂಟರ್‌ನ್ಯಾಷನಲ್ ಸೀರಿಸ್ ಅಥ್ಲೆಟಿಕ್‌ನಲ್ಲಿ ಭಾಗವಹಿಸಿ ಜಾವಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

## ಸಿಲಿಂಡರ್ ಸ್ಫೋಟ: ನಾಲ್ವರಿಗೆ ಗಾಯ

• ಪ್ರಜೋದಯ ವರದಿ

**ಅರಕಲಗೂಡು:** ಖಾಲಿಯಾದ ಗ್ಯಾಸ್ ಸಿಲಿಂಡರ್ ಬದಲಾಯಿಸುವ ವೇಳೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿ ಮನೆಯಲ್ಲಿದ್ದ ನಾಲ್ವರು ಗಾಯಗೊಂಡ ಘಟನೆ ನಡೆದಿದೆ.

ತಾಲ್ಲೂಕಿನ ಕೊಣನೂರು ಹೋಬಳಿಯ ಕೆ.ಅಬ್ಬೂರು ಗ್ರಾಮದಲ್ಲಿರುವ ಸುಂದರೇಶ್ ಅವರ ಮನೆಯಲ್ಲಿ ಈ ಅವಘಡ ಸಂಭವಿಸಿದೆ. ಖಾಲಿಯಾದ ಸಿಲಿಂಡರ್ ಬದಲಿಗೆ ಹೊಸ ಸಿಲಿಂಡರ್ ಅಳವಡಿಸುತ್ತಿದ್ದಾಗ ಏಕಾಏಕಿ ಸೋರಿಕೆಯಾಗಿ ಸ್ಫೋಟ ಉಂಟಾಗಿದೆ.

ಘಟನೆಯಲ್ಲಿ ಮಹಿಳೆ, ಆಕೆಯ ಪುತ್ರ ಸೇರಿದಂತೆ ಇತರರು ಗಾಯಗೊಂಡಿದ್ದು, ಮನೆಯಲ್ಲಿದ್ದ ಲಕ್ಷಾಂತರ ಮೌಲ್ಯದ ವಸ್ತುಗಳು ಹಾನಿಗೊಂಡಿವೆ. ಸದ್ಯಕ್ಕೆ ಯಾವುದೇ

ರೀತಿಯ ಪ್ರಾಣಾಪಾಯವಾಗದೆ ಎಲ್ಲರೂ ಪಾರಾಗಿದ್ದಾರೆ.

ಗಾಯಾಳುಗಳನ್ನು ತಕ್ಷಣ ಕೊಣನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಈ ಕುರಿತು ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ಈ ಸಂಬಂಧ ತನಿಖೆಯನ್ನು ಚುರುಕುಗೊಳಿಸಲಾಗಿದೆ.

## ಪಾಕಿಸ್ತಾನದ ಮಧ್ಯಸ್ಥಿಕೆ ಬೇಕಿಲ್ಲ ಎಂದ ಇರಾನ್

**ಟೆಹ್ರಾನ್:** ಪಾಕಿಸ್ತಾನವು ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು, ನೇರ ಸಂಧಾನಕಾರ ಪಾತ್ರ ನಿರ್ವಹಿಸಲು ನಡೆಸಲು ಸಿದ್ಧ ಎಂದು ಹೇಳಿಕೊಂಡ ನಂತರ, ಇರಾನ್ ಪಾಕಿಸ್ತಾನ ನೇತೃತ್ವದ ಅಂತಹ ಯಾವುದೇ ಸಂಧಾನ ಪ್ರಯತ್ನಗಳಲ್ಲಿ ಭಾಗವಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಕುರಿತು ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಮುಂಬೈನಲ್ಲಿರುವ ಇರಾನ್ ಕಾನ್ಸುಲೇಟ್ ಜನರಲ್ ಕಚೇರಿ, ನಾವು ಅಮೆರಿಕದೊಂದಿಗೆ ಯಾವುದೇ ನೇರ ಮಾತುಕತೆಯಲ್ಲಿ ತೊಡಗಿಸಿಕೊಳ್ಳುವುದಿಲ್ಲ, ಆದರೆ ಅಮೆರಿಕ ಮತ್ತು ಇರಾನ್ ನಡುವೆ ಮಧ್ಯಸ್ಥಿಕೆ ವಹಿಸುವ ಪಾಕಿಸ್ತಾನದ ಆಫರ್ ಬಗ್ಗೆ ನಮಗೆ ಯಾವ ಆಸಕ್ತಿಯೂ ಇಲ್ಲ ಎಂದು ಸ್ಪಷ್ಟಪಡಿಸಿದೆ.

## ಎತ್ತಿನಕಟ್ಟೆ ಗ್ರಾಮದೇವತೆ ಪ್ರತಿಷ್ಠಾಪನಾ ಮಹೋತ್ಸವ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಎತ್ತಿನಕಟ್ಟೆ ಗ್ರಾಮದಲ್ಲಿ ಗ್ರಾಮದೇವತಾ ದೇವಾಲಯ ಜೀರ್ಣೋದ್ಧಾರ ಮತ್ತು ವಿಗ್ರಹ ಪ್ರತಿಷ್ಠಾಪನಾ ಕಾರ್ಯ ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಸೋಮವಾರ ಭಕ್ತಿಪೂರ್ವಕವಾಗಿ ನೆರವೇರಿತು. ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕ ಹೆಚ್.ಪಿ. ಸ್ವರೂಪ್ ಸೇರಿ ಹಲವರು ಭಾಗವಹಿಸಿ, ವಿಶೇಷ ಪೂಜೆ ಸಲ್ಲಿಸಿದರು.

ಗ್ರಾಮ ದೇವತೆ ಮೆರವಣಿಗೆ, ಹೋಮ, ಕಳಪ್ರತಿಷ್ಠಾಪನೆ, ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವ, ಅಭಿಷೇಕ ಸೇರಿ ವಿವಿಧ ಪೂಜಾ-ಕೈಂಕರ್ಯಗಳು ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ಈ ವೇಳೆ ಗ್ರಾಮಸ್ಥರ ಬಹುದಿನಗಳ ಬೇಡಿಕೆಯಾಗಿದ್ದ ಹೊಸದಾಗಿ ನಿರ್ಮಾಣವಾಗಿರುವ ದೇವೇಗೌಡ ಸಮುದಾಯ ಭವನವನ್ನು ಉದ್ಘಾಟಿಸಲಾಯಿತು. ಈ ವೇಳೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಸಮುದಾಯ ಭವಣದಿಂದ ಗ್ರಾಮಸ್ಥರಿಗೆ ಶುಭ-ಸಮಾರಂಭಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು. ಬಳಿಕ ಗ್ರಾಮದಲ್ಲಿ ಆಗಬೇಕಿರುವ ಇನ್ನಷ್ಟು ಅಭಿವೃದ್ಧಿ ಕಾರ್ಯಗಳ ಕುರಿತು ಗ್ರಾಮದ ಮುಖಂಡರ ಜೊತೆ ಚರ್ಚಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರುಗಳು, ಜೆಡಿಎಸ್ ಕಾರ್ಯಕರ್ತರುಗಳು, ಯುವಕರು, ಹಿರಿಯರು, ಸುತ್ತ ಮುತ್ತಲಿನ ಗ್ರಾಮದ ಸಾರ್ವಜನಿಕರು ಉಪಸ್ಥಿತರಿದ್ದರು.

## ರೈತರ ಸ್ವಾವಲಂಬನೆಗೆ ಹಾಲು ಸಂಗ್ರಹಣಾ ಸಹಕಾರ ಸಂಘ

• ಪ್ರಜೋದಯ ವರದಿ

**ಹೊಳೆನರಸೀಪುರ:** ರೈತರ ಸ್ವಾವಲಂಬನೆಗೆ ಅನುಕೂಲವಾಗುವಂತೆ ಅಗತ್ಯ ಇರುವ ಗ್ರಾಮೀಣ ಭಾಗದಲ್ಲಿ ಹಾಲಿನ ಸಂಗ್ರಹಣೆಗಾಗಿ ಹಾಲು ಸಂಗ್ರಹಣಾ ಸಹಕಾರ ಸಂಘಗಳನ್ನು ತೆರೆಯಲಾಗುತ್ತಿದೆ ಎಂದು ಶಾಸಕ ಎಚ್.ಡಿ.ರೇವಣ್ಣ ಅವರು ತಿಳಿಸಿದರು.

ತಾಲೂಕಿನ ಬೆಟ್ಟದ ಸಾತೇನಹಳ್ಳಿ ಗ್ರಾಮದಲ್ಲಿ ಸೋಮವಾರ ನಂದಿನಿ ಹಾಲು ಸಂಗ್ರಹ ಸಹಕಾರ ಸಂಘವನ್ನು ಉದ್ಘಾಟಿಸಿದ ಅವರು, ರೈತರು ಹೈನೋದ್ಯಮ ಅನುಸರಿಸಿದಲ್ಲಿ ಆರ್ಥಿಕ ಸ್ವಾವಲಂಬನೆ ಸಾದ್ಯವಿದೆ ಎಂದರು. ರೈತರು ಡೈರಿಗೆ ಹಾಕುವ ಪ್ರತಿ ಲೀಟರ್ ಹಾಲಿಗೆ ಹಾಲಿನ ಒಕ್ಕೂಟದಿಂದ 34 ರೂ ಮತ್ತು ಜತೆಗೆ ಸರಕಾರದ ಸಹಾಯಧನ 5 ರೂ. ನಂತೆ ಒಟ್ಟು 39 ರೂ. ನೀಡಲಾಗುತ್ತದೆ.

ಸುತ್ತಲಿನ ಹೂವಿನಹಳ್ಳಿ, ಮಲ್ಲೇಶಪುರ ಗ್ರಾಮಗಳಿಂದ ನಿತ್ಯ ಬೆಳಗ್ಗೆ ಮತ್ತು ಸಂಜೆ 500 ಲೀಟರ್ ಹಾಲು ಸಂಗ್ರಹವಾಗುವ ನಿರೀಕ್ಷೆ ಇದೆ. ತಲಾ 10 ಲೀಟರ್ ಹಾಲು ಹಾಕುವ ರೈತರಿಗೆ ನಿತ್ಯ 390 ರೂ.ಗಳಂತೆ ತಿಂಗಳಿಗೆ 12 ಸಾವಿರ ರೂ. ಸಿಗಲಿದೆ. ಹಸು, ಎಮ್ಮೆ ಖರ್ಚು ಕಳೆದು ಉಳಿದ 6 ರಿಂದ 7 ಸಾವಿರ ರೂ ಲಭ್ಯವಾಗುವ ಕಾರಣ ಅಷ್ಟಿಷ್ಟು ಆರ್ಥಿಕ ಪ್ರಗತಿ ಕಾಣಬಹುದು ಎಂದು ಅವರು ಕಿವಿಮಾತು ಹೇಳಿದರು.

ಕಳೆದ 25 ವರ್ಷಗಳಿಂದ ಉಳುಮೆ ಮಾಡಿಕೊಂಡಿದ್ದರೂ, ಹತ್ತಾರು ರೈತರಿಗೆ ಇಂದಿಗೂ ಕಂದಾಯ ಇಲಾಖೆಯಿಂದ ಭೂಮಿ ಮಂಜೂರಾತಿ ಪತ್ರ ನೀಡುತ್ತಿಲ್ಲ, ಬೆಟ್ಟದ ಮೇಲೆ ತೆರಳಲು ಕಚ್ಚಾರಸ್ತೆ ಮಾಡಿಕೊಡಿ ಎಂದು ಗ್ರಾಮಸ್ಥರು ಬೇಡಿಕೆ ಇಟ್ಟರು. ಮನವಿ ಸ್ವೀಕರಿಸಿದ ಶಾಸಕ, ತಾಲೂಕು ಕಚೇರಿಯಲ್ಲಿ ಸಭೆ ನಡೆದಿದ್ದಾಗ ವಿಚಾರ ಪ್ರಸ್ತಾಪಿಸಿ ತೀರ್ಮಾನಿಸಲಾಗುವುದು ಎಂದು ಭರವಸೆ ನೀಡಿದರು. ಬೆಟ್ಟದ ಮೇಲೆ ತೆರಳಲು ರಸ್ತೆ ಮಾಡುವ ವಿಚಾರದಲ್ಲಿ ಕೆಲವರು ಸಡ್ಡು ಹೊಡೆದಿದ್ದಾರೆ. ಇದಕ್ಕೆಲ್ಲಾ ರಸ್ತೆ ಮಾಡಿಸುವ ಮೂಲಕ ಉತ್ತರ ನೀಡುತ್ತೇನೆ ಎಂದು ಪ್ರತಿಕ್ರಿಯಿಸಿದರು. ಸುಂದರ ದೇವಾಲಯ ಮತ್ತು ಗ್ರಾಮಕ್ಕೆ ಕಾಂಕ್ರೀಟ್ ರಸ್ತೆ ಮಾಡಿಸಿದ್ದೇನೆ. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಬಂದ ಮೇಲೆ ಬಿಡಿಗಾಸೂ ಬಂದಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಮದ ಮುಖಂಡರುಗಳಾದ ಬಸಪ್ಪ, ಜವರಣ್ಣ ಹಾಗೂ ನಂದಿನಿ ಹಾಲು ಒಕ್ಕೂಟದ ಅಧಿಕಾರಿ ಪುರುಶೋತ್ತಮ್ ಉಪಸ್ಥಿತರಿದ್ದರು.

## ಪ್ರತಿಯೊಬ್ಬ ನಾಗರಿಕನಿಗೂ ಕಾನೂನಿನ ಅರಿವು ಅತ್ಯಗತ್ಯ

### ಪ್ರಾಂಶುಪಾಲ ಡಿ.ಎಸ್.ರಾಜು ಅಭಿಮತ

• ಪ್ರಜೋದಯ ವರದಿ

**ಹಾಸನ:** ನಗರದ ಎಂ. ಕೃಷ್ಣ ಕಾನೂನು ಮಹಾವಿದ್ಯಾಲಯದ ಕಾನೂನು ಅರಿವು ಮತ್ತು ನೆರವು ಘಟಕ ಹಾಗೂ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ಕಾನೂನು ಅರಿವು-ನೆರವು' ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಗಣ್ಯರು ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಉದ್ಘಾಟಿಸಿ, ವಿದ್ಯಾರ್ಥಿಗಳಲ್ಲಿ ಕಾನೂನು ಪ್ರಜ್ಞೆ ಇಂದಿನ ಅಗತ್ಯ ಎಂದು ಸಾರಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ರಾಜು ಡಿ.ಎಸ್. ಅವರು ಮಾತನಾಡಿ, ಕಾನೂನು ಎಂಬುದು ಸಮಾಜದಲ್ಲಿ ರಾಜನಿಲ್ಲದ ರಾಜ್ಯವಿದ್ದಂತೆ. ಪ್ರತಿ

ಯೊಬ್ಬ ನಾಗರಿಕನಿಗೂ ಕಾನೂನಿನ ಅರಿವು ಅತ್ಯಗತ್ಯವಾಗಿದ್ದು, ಕಾನೂನು ವಿದ್ಯಾರ್ಥಿಗಳು ಅತ್ಯಂತ ರಸವತ್ತಾದ ವಿಷಯಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ತಲುಪಿಸಿದ್ದಾರೆ ಎಂದು ಅವರು ಶ್ಲಾಘಿಸಿದರು.

ಶೈಕ್ಷಣಿಕ ಮುಖ್ಯಸ್ಥ ಡಾ. ಇರ್ಷಾದ್ ಎಂ.ಬಿ. ಅವರು ಮಾತನಾಡಿ, ಪ್ರೌಢಶಾಲಾ ಹಂತದಲ್ಲಿಯೇ ಕಾನೂನು ಅರಿವು ಮೂಡಿಸುವ ಪಠ್ಯಕ್ರಮಗಳನ್ನು ಅಳವಡಿಸಬೇಕು ಎಂಬ ಆಶಯ ವ್ಯಕ್ತಪಡಿಸಿದರೆ, ರಾಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ. ಪಾರ್ಥೇಶ್ ಕೆ.ವಿ. ಅವರು ಹಕ್ಕುಗಳ ಉಲ್ಲಂಘನೆಯಾದಾಗ ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಲು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕಾನೂನು ವಿದ್ಯಾರ್ಥಿಗಳಾದ ಅರ್ಜುನ್ ಎ.ಎನ್. ಅವರು 'ಬಾಲ ನ್ಯಾಯ ಕಾಯ್ದೆ 2015'ರ ಅಡಿಯಲ್ಲಿ ಮಕ್ಕಳ ರಕ್ಷಣೆ ಮತ್ತು ಸುರಕ್ಷಿತ ಪರಿಸರದ ಮಹತ್ವದ ಬಗ್ಗೆ ವಿವರಿಸಿದರು. ಮಮತಾ ಚೌದರಿ ಅವರು 'ಪೋಕ್ಸೋ ಕಾಯ್ದೆ'ಯಡಿ ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸಲು ಇರುವ ಕಟ್ಟುನಿಟ್ಟಿನ ಶಿಕ್ಷೆಗಳ ಬಗ್ಗೆ ಜಾಗೃತಿ ಮೂಡಿಸಿದರು.

ಅಭಿಷೇಕ್ ಎಚ್.ಎನ್. ಅವರು ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ್ಯ ವಿವಾಹ ತಡೆ ಕಾಯ್ದೆಯ ಕುರಿತು ಮಾಹಿತಿ ನೀಡಿದರು.

ಅಮೂಲ್ಯ ಜಿ.ಸಿ. ಕಾರ್ಯಕ್ರಮ ನಿರೂಪಿಸಿದರೆ, ಭೂಷಣ್ ಸ್ವಾಗತಿಸಿ, ಅನಿಲ್ ಕೆ.ಎಚ್. ವಂದಿಸಿದರು. ವೇದಿಕೆಯಲ್ಲಿ ಉಪನ್ಯಾಸಕರಾದ ಡಾ. ಶಾಂತ ಪಿ.ಆರ್., ಡಾ. ಹರೀಶ್, ಶ್ರೀನಿವಾಸ್ ಹಾಗೂ ರಾಜ್ಯಶಾಸ್ತ್ರ ವಿಭಾಗದ ಸ್ನಾತಕೋತ್ತರ ಮತ್ತು ಪದವಿ ವಿದ್ಯಾರ್ಥಿಗಳು ಇದ್ದರು.

## ಆಯುಷ್ಮಾನ್ ಭಾರತ್ ಯಶಸ್ವಿನಿ ಯೋಜನೆ ನೋಂದಣಿಗೆ ಸಲಹೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಜನರಿಗೆ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಆಯುಷ್ಮಾನ್ ಭಾರತ್ ಯಶಸ್ವಿನಿ ಯೋಜನೆ ನೋಂದಣಿ ಪ್ರಾರಂಭಿಸಿದ್ದು ಎಲ್ಲರೂ ಅದರ ಸದುಪಯೋಗ ಪಡೆಯಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮನವಿ ಮಾಡಿದರು.

ತಾಲ್ಲೂಕಿನ ವಳಗೇರಹಳ್ಳಿ ಗ್ರಾಮದಲ್ಲಿ ಆರೋಗ್ಯ ಇಲಾಖೆಯ ಆಯುಷ್ಮಾನ್ ಸ್ವಾಸ್ಥ್ಯ ಯೋಜನೆ ವತಿಯಿಂದ 65 ಲಕ್ಷ ರೂ. ವೆಚ್ಚದಲ್ಲಿ ನೂತನ ಆರೋಗ್ಯ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಕೇಂದ್ರ ಸರ್ಕಾರದ 15ನೇ ಹಣಕಾಸಿನ ಯೋಜನೆ ಮೂಲಕ ಆರೋಗ್ಯ ಇಲಾಖೆಯ ಆಯುಷ್ಮಾನ್ ಸ್ವಾಸ್ಥ ಯೋಜನೆ ವತಿಯಿಂದ

ತಾಲ್ಲೂಕಿನಲ್ಲಿ 40 ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿದೆ. ಗ್ರಾಮದಲ್ಲಿ ಸುಮಾರು 65 ಲಕ್ಷ ರೂ. ವೆಚ್ಚದಲ್ಲಿ ನೂತನ ಆರೋಗ್ಯ ಕಟ್ಟಡ ನಿರ್ಮಾಣವಾಗಲಿದೆ. ಸುಸಜ್ಜಿತ ಹೊಸ ಕಟ್ಟಡದಲ್ಲಿ ಗ್ರಾಮಸ್ಥರಿಗೆ ಉತ್ತಮ ಆರೋಗ್ಯ ಸೇವೆ ಲಭಿಸಲಿದೆ ಎಂದರು.

ಕೇಂದ್ರ, ಹಾಗು ರಾಜ್ಯ ಸರ್ಕಾರಗಳು ಆರೋಗ್ಯ ಇಲಾಖೆಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಸೇವೆ ಪಡೆಯಲು ಯೋಜನೆಗಳನ್ನು ರೂಪಿಸುವಂತೆ ಮನವಿ ಮಾಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ವಿ.ಎನ್. ಮಂಜುನಾಥ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಧರ್ಮಣ್ಣ, ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ದೇವರಾಜ್, ಮುಖಂಡರಾದ ಬೋರೇಗೌಡ, ಚಿಕ್ಕೇಗೌಡ ಇತರರಿದ್ದರು.

## ಮೂಢನಂಬಿಕೆಗಳ ವಿರುದ್ಧ ಜಾಗೃತಿ ಮೂಡಿಸಿದ ದೇವರ ದಾಸಿಮಯ್ಯ

• ಪ್ರಜೋದಯ ವರದಿ

**ಅರಸೀಕೆರೆ:** ಆದ್ಯ ವಚನಕಾರ ದೇವರ ದಾಸಿಮಯ್ಯ ಅವರು ಮೂಢ ನಂಬಿಕೆಗಳ ವಿರುದ್ಧ ಸಮಾಜವನ್ನು ಜಾಗೃತಿಗೊಳಿಸಿದ ಮಹಾನ್ ದಾರ್ಶನಿಕರು ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ತಿಳಿಸಿದರು.

ನಗರದ ಸುಬ್ರಮಣ್ಯ ನಗರದಲ್ಲಿನ ದೇವಾಂಗ ಸಮುದಾಯ ಭವನದಲ್ಲಿ ಆಯೋಜಿಸಿದ್ದ ದೇವರ ದಾಸಿಮಯ್ಯ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ದೈವಾಂಶ ಸಂಭೂತರು, ಮಹಾಪುರುಷರು, ದಾರ್ಶನಿಕರು ಜನ್ಮ ತಳೆದು ಸಮಾಜದಲ್ಲಿ ಜಾಗೃತಿ ಮೂಡಿಸುವ ಮಹತ್ಕಾರ್ಯ ಮಾಡಿದ್ದಾರೆ. ಅಂತಹ ದಾರ್ಶನಿಕರಲ್ಲಿ ದೇವರ ದಾಸಿಮಯ್ಯ ಅವರು ಪ್ರಮುಖರಾಗಿದ್ದಾರೆಂದರು.

ದಾಸಿಮಯ್ಯ ಅವರ ವಚನಗಳಲ್ಲಿ

ಅಡಕವಾಗಿರುವ ಸಂದೇಶಗಳು ಮನುಕುಲಕ್ಕೆ ದಾರಿ ದೀಪವಾಗಿದೆ. ವಚನಗಳು ಮತ್ತು ದಾಸರ ವಾಣಿಗಳನ್ನು ಕೇಳಿದರೆ ಸಾಲದು. ಅವುಗಳ ತತ್ವಾದರ್ಶಗಳನ್ನು ಜೀವನದಲ್ಲಿ ಪಾಲಿಸುವ ಸಂಕಲ್ಪ ಮಾಡಬೇಕೆಂದರು.

ದೇವಾನು ದೇವತೆಗಳಿಗೆ ವಸ್ತ್ರ ಸಿದ್ಧಪಡಿಸಿ ಕೊಟ್ಟ ದೇವಾಂಗ ಸಮಾಜಕ್ಕೆ ಅನೇಕ ವರ್ಷಗಳ ಇತಿಹಾಸವಿದೆ. ದೇವರ ದಾಸಿಮಯ್ಯ ಅವರು 10ನೇ ಶತಮಾನದಲ್ಲಿ ಜನಿಸಿದರೆ 12ನೇ ಶತಮಾನದಲ್ಲಿ ಬಸವಾದಿ ಶಿವಶರಣರು ಜನ್ಮ ಪಡೆದು ತತ್ವ ಆದರ್ಶಗಳನ್ನು ಸಾರಿದ್ದಾರೆ. 16ನೇ ಶತಮಾನದಲ್ಲಿ ಕನಕದಾಸರು ತಮ್ಮ ಸಂಕೀರ್ತನೆಗಳ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಿ ಮಹಾಸಂತರಾದರು. ಅವರು ನಮ್ಮೆಲ್ಲರಿಗೂ ತೋರಿದ ಸನ್ಮಾರ್ಗಗಳು ಪ್ರತಿಯೊಬ್ಬರ ಬದುಕಿಗೆ ದಾರಿ ದೀಪವಾಗಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಧರ್ಮಶೇಖರ್ ಅವರು ಮಾತನಾಡಿ, ದೇವಾಂಗ ಸಮಾಜವು ನಾಗರಿಕ ಸಮಾಜಕ್ಕೆ ವಸ್ತ್ರ ಪ್ರಧಾನ ಮಾಡುವ ತಮ್ಮ ಕುಲಕಸುಬಿಗೆ ಹೆಸರುವಾಸಿಯಾಗಿದ್ದು, ಪ್ರತಿಯೊಂದು ಸಮಾಜ ಆಭಾರಿಯಾಗಿದೆ. ಆದರೆ ಪ್ರಸ್ತುತ ವೈಜ್ಞಾನಿಕ ಕಾಲಘಟ್ಟದಲ್ಲಿ ಸಿದ್ಧ ಉಡುಪುಗಳ ಮಾರುಕಟ್ಟೆಯ ಪ್ರವೇಶದಿಂದ ಸಾಂಪ್ರದಾಯಿಕ ಉಡುಪುಗಳಿಗೆ ಹೆಚ್ಚಿನ ಬೇಡಿಕೆ ಇಲ್ಲದೆ ನೇಕಾರರ ಬದುಕು ಅಭದ್ರತೆಯಿಂದ ಕೂಡಿರುವುದು ಕಳವಳದ ಸಂಗತಿ ಎಂದರು.

ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಅರುಣ್ ಕುಮಾರ್ ಅವರು ಮಾತನಾಡಿ, ದೇವಾಂಗ ಸಮಾಜ ಸಣ್ಣ ಸಮಾಜವಾಗಿದ್ದರೂ ಇನ್ನಿತರ ಸಮಾಜಗಳ ಜೊತೆ ಉತ್ತಮ ಬಾಂಧವ್ಯವನ್ನು ಹೊಂದಿರುವುದರಿಂದ ಎಲ್ಲರಿಗೂ ವಿಶೇಷ ಗೌರವ ಇದೆ. ಆದರೆ ಸಣ್ಣ ಸಮಾಜವಾಗಿರುವ ದೇವಾಂಗ ಸಮಾಜ ತಮ್ಮಲ್ಲಿನ ಬಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಂಘಟಿತ ಶಕ್ತಿಯಾಗಿ ಬೆಳೆಯಬೇಕಾಗಿದೆ. ಹಾಗಾದರೆ ಮಾತ್ರ ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಸದೃಢರಾಗಲು ಸಾಧ್ಯವಾಗುತ್ತದೆ ಎಂದರು.

ತಹಶೀಲ್ದಾರ್ ಸಂತೋಷ್ ಕುಮಾರ್, ಶಿರಸ್ತೇದಾರ್ ಶಿವಶಂಕರ್, ತಾಲ್ಲೂಕು ದೇವಾಂಗ ಸಮಾಜದ ಅಧ್ಯಕ್ಷ ಗಿರಿಯಪ್ಪ, ದೇವರ ದಾಸಿಮಯ್ಯ ಸಹಕಾರ ಸಂಘದ ಅಧ್ಯಕ್ಷ ಪರಮೇಶ್, ದೇವಾಂಗ ಸಮಾಜದ ಮುಖಂಡರಾದ ಸಿಂಗಟಗೆರೆ ಸಿದ್ದಪ್ಪ, ತಮ್ಮಯ್ಯ ಶೆಟ್ಟಿ, ಮಹೇಂದ್ರ ಕುಮಾರ್, ರವಿ, ಶೇಖರ್, ರಂಗಣ್ಣ, ಯಳವಾರೆ ರಂಗನಾಥ್, ಸಂತೋಷ್ ಹಾಗು ಇನ್ನಿತರರು ಹಾಜರಿದ್ದರು.

## ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಪಲ್ಲಕ್ಕಿ ಉತ್ಸವ | ಮಂತ್ರ ಪಠಣ- ವಾದ್ಯ ವೈಭವ

# ಭಗವಾನ್ ಮಹಾವೀರರ ಅದ್ದೂರಿ ಜಯಂತ್ಯೋತ್ಸವ

• ಪ್ರಜೋದಯ ವರದಿ

**ಹಳೇಬೀಡು:** ಸಕಲ ಜೀವಿಗಳಿಗೆ ಒಳಿತಾಗಲಿ ಜಗತ್ತಿನಲ್ಲಿ ಶಾಂತಿ ನೆಲೆಸಲಿ ಎಂದು ಅಹಿಂಸೆಯ ಸಂದೇಶವನ್ನು ಸಾರಿದ ಜೈನ ಧರ್ಮದ 24 ನೇ ತೀರ್ಥಂಕರ ಭಗವಾನ್ ಮಹಾವೀರರ 2625 ನೇ ಜನ್ಮ ಜಯಂತೋತ್ಸವ ಸೋಮವಾರ ಅಡಗೂರು ಜಿನ ಮಂದಿರದಲ್ಲಿ ವೈಭವದಿಂದ ನೆರವೇರಿತು.

ಮಹಾವೀರ ಜೈನ ಸಂಘದ, ರತ್ನತ್ರಯ ಮಹಿಳಾ ಸಮಾಜ ಹಾಗೂ ಅಡಗೂರು ಜೈನ ಸಮಾಜದ ಆಶ್ರಯದಲ್ಲಿ ಧಾರ್ಮಿಕ ವಿಧಾನ ನಡೆಯಿತು. ಜಿನಮಂದಿರದಲ್ಲಿ ಮುಂಜಾನೆ 5 ಗಂಟೆಯಿಂದಲೇ ಪುರೋಹಿತರ ಮಂತ್ರ ಪಠನ ಹಾಗೂ ವಾದ್ಯ ವೈಭವ ಮೊಳಗಿತು. ಬೆಳಿಗ್ಗೆ ನಿತ್ಯ ಪೂಜೆಯಿಂದ ಧಾರ್ಮಿಕ ಆಚರಣೆ ಆರಂಭವಾಯಿತು. ನಂತರ ಜನ್ಮ ಜಯಂತಿಯ ಪೂಜೆ ಪೂಜೆ ನೆರವೇರಿಸಲಾಯಿತು.

ನಂತರ 8 ಗಂಟೆಗೆ ತೀರ್ಥಂಕರರ ಮಸ್ತಕಾಭಿಷೇಕಕ್ಕೆ ಸುಮಂಗಲೆಯರಿಂದ ಅಗ್ರೋಧಕ ತರುವ ಮೆರವಣಿಗೆ ನಡೆಯಿತು. ಮೆರವಣಿಗೆಯೊಂದಿಗೆ ಪಲ್ಲಕ್ಕಿ ಉತ್ಸವ ಊರಿನ ಪ್ರಮುಖ ಬೀದಿಗಳಲ್ಲಿ ಸಾಗಿತು. ಮಹಾವೀರರ ಉತ್ಸ ವ ಮೂರ್ತಿಗೆ ವಿಶೇಷ ಪೂಜೆ ನೆರವೇರಿಸಿದ ನಂತರ ಹೂವಿನಿಂದ ಅಲಂಕರಿಸಿದ್ದ ಪಲ್ಲಕ್ಕಿಯಲ್ಲಿ ಆರೋಹಣ ಮಾಡಲಾಯಿತು. ಜೈ ಜೈ ವೀರ ಜೈ ಮಹಾವೀರ, ಅಹಿಂಸೋ ಪರಮೋ ಧರ್ಮ ಕೀ ಜೈ ಎಂಬ ಜಯಘೋಷದೊಂದಿಗೆ ಮೆರವಣಿಗೆ ಸಾಗಿತು. ಪಲ್ಲಕ್ಕಿಯ ಇಕ್ಕೆಲಗಳಲ್ಲಿ ಜೈನ ಶ್ರಾವಕ ಶ್ರಾವಕಿಯರು ಬಣ್ಣದ ಛತ್ರಿಗಳನ್ನು ಹಿಡಿದು ಚಾಮರ ಬೀಸುತ್ತ ಹೆಜ್ಜೆ ಹಾಕಿದರು.

ಪಂಚ ಕಳಸ, ಅಷ್ಟಮಂಗಲ ಹಾಗೂ ಪಂಚವರ್ಣದ ಬಾವುಟ

ಮೆರವಣಿಗೆಗೆ ಕಳೆ ನೀಡಿದವು

ಕಳಸ ಹೊತ್ತ ಮಹಿಳೆಯರು ಜಿನ ಗಾಯನ ಹಾಡುತ್ತ ಸಾಗಿದರು. ಜಿನ ಮಂದಿರ ಪಕ್ಕದ ಮಹಾವೀರ ಭವನದ ಸಭಾಂಗಣ ವೇದಿಕೆಯಲ್ಲಿ ನಿರ್ಮಿಸಿದ ಆಕರ್ಷಕ ಮಂಟಪದಲ್ಲಿ ಉತ್ಸವ ಮೂರ್ತಿಯನ್ನು ಕೂರಿಸಲಾಯಿತು. ವಿವಿಧ ಅಭಿಷೇಕಗಳ ಹರಾಜು ಪ್ರಕ್ರಿಯೆ ನಡೆಸಿದ ನಂತರ ಮಹಾವೀರರ ಮಸ್ತಕಾಭೀಷೇಕ ನೆರವೇರಿತು. 108 ಕಳಸಗಳಿಂದ ಜಲಾಭಿಷೇಕ ಮಾಡಿದಾಕ್ಷಣ ಅಮೃತ ಶಿಲೆಯ ಭಗವಾನ್ ಮಹಾವೀರರ ಮೂರ್ತಿಯು ವಿವಿಧ ಭಂಗಿಯಲ್ಲಿ ಕಂಗೊಳಿಸಿತು. ನಂತರ ಎಳನೀರು, ಕ್ಷೀರ (ಹಾಲು), ಇಕ್ಷುರಸ (ಕಬ್ಬಿನ ಹಾಲು), ನಾಲ್ಕು ದಿಕ್ಕಿನಲ್ಲಿ ಸ್ಥಾಪಿಸಿದ ಸ್ಥಾಪಿಸಿದ ಚತುಷ್ಕೋನ ಕಳಸ, ಶ್ರೀಗಂಧ, ಅರಿಶಿನ, ಕಲ್ಕಚೂರ್ಣ (ಅಕ್ಕಿಹಿಟ್ಟು), ಚಂದನ, ಕಷಾಯಗಳ ಅಭಿಷೇಕದಲ್ಲಿ ಮೂರ್ತಿ ಬಣ್ಣದೋಕುಳಿಯಲ್ಲಿ ಮಿಂದೆದಂತೆ ಕಂಗೊಳಿಸಿತು. ಅಭಿಷೇಕದ ನಂತರ ಸಕಲ ಜೀವಿಗಳಿಗೆ ಶಾಂತಿ ನೆಮ್ಮದಿ ಮುಕ್ತಿ ದೊರಕಲಿ ಎಂದು ಮಹಾಶಾಂತಿ ಮಂತ್ರದೊಂದಿಗೆ ಶಾಂತಿಧಾರೆ ನೆರವೇರಿಸಲಾಯಿತು. ಭಗವಾನ್ ಮಹಾವೀರರ ಆರತಿ ಹಾಡಿನೊಂದಿಗೆ ಮಹಾಮಂಗಳಾರತಿ ನೆರವೇರಿತು.

ಹಿರಿಯ ಮುಖಂಡ ಎ.ಬಿ. ಕಾಂತರಾಜು, ಜೈನ ಸಮಾಜ ಅಧ್ಯಕ್ಷ ಎಂ.ಎ.ನಾಗೇಂದ್ರಕುಮಾರ್, ಕಾರ್ಯದರ್ಶಿ ಎಂ.ಎನ್.ಶಶಿಕುಮಾರ್, ಖಜಾಂಚಿ ಧವನ್ ಜೈನ್, ಪದಾಧಿಕಾರಿಗಳಾದ ಮನ್ಮಥ ರಾಜು, ಚಂದ್ರಪ್ರಭ, ಕರುಣಾಕರ, ಅತುಲ್ ಜೈನ್, ವಿಜಯ್‌ಕುಮಾರ್, ಸುಮತಿ ಕುಮಾರ್, ನಾಗಚಂದ್ರ, ವಾದಿರಾಜ್, ರತ್ನತ್ರಯ ಮಹಿಳಾ ಸಮಾಜ ಅಧ್ಯಕ್ಷೆ ಪುಷ್ಪರತ್ನ ರಾಜು, ಸುಧಾಕುಮಾರಿ, ರೇಖಾ ಧವನ್, ಸುನಿತಾಕುಮಾರಿ, ಭಾರತಿ ಅತುಲ್, ಜಯಪದ್ಮ ಹಾಜರಿದ್ದರು

## ಜನಮಾನಸದಲ್ಲಿ ಬೇರುಬಿಟ್ಟ ಪೌರಾಣಿಕ ನಾಟಕಗಳು

• ಪ್ರಜೋದಯ ವರದಿ

**ಹಾಸನ:** ನಗರದ ಬೇಲೂರು ರಸ್ತೆ ವಿಜಯನಗರ ಬಡಾವಣೆ ಆದಾಯ ತೆರಿಗೆ ಕಛೇರಿ ಬಳಿ ಜೈ ಮಾರುತಿ ಕೃಪಾ ಪೋಷಿತ ನಾಟಕ ಮಂಡಳಿ ಕಲಾವಿದರು ದೊಡ್ಡಮಂಡಿಗನಹಳ್ಳಿ ಎಂ.ಸಿ.ಶ್ರೀನಿವಾಸ್ ಸಾರಥ್ಯದಲ್ಲಿ ಜಿಲ್ಲಾ ರಾಜ್ಯೋತ್ಸ ವ ಪ್ರಶಸ್ತಿ ವಿಜೇತ ಕಲಾವಿದರು ಜವರೇಗೌಡ, ತೇಜೂರು ಸೋಮಣ್ಣ ನೇತೃತ್ವದಲ್ಲಿ ಹಾಸನ ನಗರ ಮತ್ತು ಸುತ್ತಮುತ್ತಲಿನ ಅನುಭವಿ ಕಲಾವಿದರಿಂದ ಹಾಸನದ ಯುವ ನಿರ್ದೇಶಕ ಹೇಮಂತ್ ದೇವರಾಜ ಆಚಾರ್ಯ ಅವರ ನಿರ್ದೇಶನದಲ್ಲಿ ಭಾನುವಾರ ರಾತ್ರಿ ಸಂಪೂರ್ಣ ರಾಮಾಯಣ ನಾಟಕ ಪ್ರದರ್ಶಿಸಿ ಸಾವಿರಾರು ಪ್ರೇಕ್ಷಕರ ಮನ ಗೆದ್ದರು.

50ಕ್ಕೂ ಹೆಚ್ಚು ಕಲಾವಿದರು, ಜನಪ್ರತಿನಿಧಿಗಳು, ಗಣ್ಯರನ್ನು ಸನ್ಮಾನಿಸಿದ ವೇದಿಕೆ ಕಾರ್ಯಕ್ರಮದಲ್ಲಿ ಸಾಹಿತಿ ಗೊರೂರು ಅನಂತ ರಾಜು ಮಾತನಾಡಿ, ನಾಟಕ ನೋಡಲು ಈ ಭಾಗದಲ್ಲಿ ಇಷ್ಟೊಂದು

ಪ್ರಮಾಣದಲ್ಲಿ ಪ್ರೇಕ್ಷಕರು ಸೇರಿರುವುದೇ ಕಲಾವಿದರಿಗೆ ಸಂತೋಷ. ಬೆಳ್ಳಾವೆ ನರಹರಿಶಾಸ್ತ್ರಿಗಳ ರಾಮಾಯಣ, ಬಿ.ಪುಟ್ಟಸ್ವಾಮಯ್ಯನವರ ಕುರುಕ್ಷೇತ್ರ ಅಂದು ಕಂಪನಿ ನಾಟಕಕ್ಕೆ ಬರೆದಿದ್ದು ಇಂದಿಗೂ ಜನಪ್ರಿಯತೆ ಉಳಿಸಿಕೊಂಡಿವೆ. ಕಲಾವಿದರು ಎಷ್ಟೇ ಬಾರಿಯಾಗಿರಲಿ ತಮಗೆ ಒಲಿದು ಬಂದ ಪಾತ್ರಗಳನ್ನು ಉತ್ಸಾಹ ಕಳೆದುಕೊಳ್ಳದೇ ಅಭಿನಯಿಸುತ್ತಾ ಬಂದಿದ್ದಾರೆ. ಕಲಾವಿದರಿಗೆ ಪ್ರೇಕ್ಷಕರ ಮೆಚ್ಚುಗೆಯ ನಾಲ್ಕು ಮಾತುಗಳೇ ಚೈತನ್ಯ ಸ್ಫೂರ್ತಿ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ್ರು, ಹಿರಿಯ ಕಲಾವಿದರಾದ ಎಂ.ಸಿ.ರಾಜು ಡಿ.ಎಂ.ಹಳ್ಳಿಲ, ಲಕ್ಷ್ಮಿಕಾಂತ್ ಕಂಚಮಾರನಹಳ್ಳಿ, ಬಾಲಕೃಷ್ಣ ಎತ್ತಿನಕಟ್ಟೆ, ಜೆಸಿಬಿ ಮಾಲೀಕರುಗಳಾದ ಪಾಪಣ್ಣ, ಹರೀಶ್, ರಘುನಂದನ್ ಮತ್ತು ಬಾಲು, ಭಾಗ್ಯ ನಾಗರಾಜು, ಗ್ರಾ.ಪಂ. ಮಾಜಿ ಸದಸ್ಯರುಗಳಾದ ಡಿ.ಎಸ್.ಕುಮಾರ್, ಅರುಣ್ ಕುಮಾರ್, ಯೋಗೇಶ್, ಕದಂಬ ಸೈನ್ಯ ಹಾಸನ ಜಿಲ್ಲಾಧ್ಯಕ್ಷರು ಎ. ಹೆಚ್.ಗಣೇಶ್ ಅಂಕಪುರ, ಕಲಾವಿದರಾದ ಡಿ.ಎಸ್. ನಾಗಮೋಹನ್, ಪಿ.ಎಂ.ಮಲ್ಲೇಶಗೌಡರು, ನಿವೃತ್ತ ಪೊಲೀಸ್ ರಂಗಸ್ವಾಮಿ, ಪ್ರಭಾಕರ್ ಸಿದ್ದಯ್ಯನಗರ, ಮಂಜೇಗೌಡ ಯರೇಹಳ್ಳಿ ಮೊದಲಾದವರು ಹಾಜರಿದ್ದರು.

## ಎ.3 ರಿಂದ 5ರ ವರೆಗೆ ಆದಿಹಳ್ಳಿ ಆದಿಲಕ್ಷ್ಮಿ ಅಮ್ಮ ಜಾತ್ರೆ

» ಮೊದಲನೇ ಪುಟದಿಂದ

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನನೀಡಲಿದ್ದಾರೆಂದರು.

ಇದೇ ಸಂದರ್ಭದಲ್ಲಿ 139ನೇ ಗುರು ತೋರಿದ ದಾರಿ ತಿಂಗಳ ಮಾಮನ ತೇರು ಪವಿತ್ರ ಹುಣ್ಣಿಮೆ ಕಾರ್ಯಕ್ರಮ ಸಹ ನೆರವೇರಲಿದೆ. ಈ ಕ್ಷೇತ್ರದಲ್ಲಿ ಪ್ರತಿ ತಿಂಗಳು ನಡೆಯುವ ಹುಣ್ಣಿಮೆ ಕಾರ್ಯಕ್ರಮಕ್ಕೆ ಆಧ್ಯಾತ್ಮಿಕ ಮಹತ್ವವಿದೆ ಎಂದು ತಿಳಿಸಿದರು.

ಎ.5ರಂದು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿರುವ ಸಿಡಿ ಉತ್ಸವ ಮತ್ತು ಮಹಾ ರಥೋತ್ಸವ ವಿಜೃಂಭಣೆಯಿಂದ ನಡೆಯಲಿದೆ. ರಥೋತ್ಸವದಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಭಕ್ತರ ಜಯಘೋಷದ ನಡುವೆ ರಥದಲ್ಲಿ ವೀಕ್ಷಣೆಗೆ ಕರೆತರಲಾಗುತ್ತದೆ. ಬಳಿಕ ಪ್ರಸಾದ ವಿನಿಯೋಗದೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ ಎಂದರು.

ಜಾತ್ರಾ ಮಹೋತ್ಸವದಲ್ಲಿ ಚನ್ನರಾಯ ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಸ್ವಯಂ ಸೇವಕರು ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದು, ಭಕ್ತರಿಗೆ ಮಾರ್ಗದರ್ಶನ, ವ್ಯವಸ್ಥೆ ಮತ್ತು ಶಿಸ್ತು ಪಾಲನೆಯಲ್ಲಿ ಸಹಕರಿಸಲಿದ್ದಾರೆಂದು ಮಾಹಿತಿ ನೀಡಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಹಾಜರಿದ್ದರು.

# ಬದುಕು ಬದುಕಲು ಬಿಡು ಸಂದೇಶ ಪಾಲಿಸೋಣ

• ಪ್ರಜೋದಯ ವರದಿ

**ಹಾಸನ:** ಬದುಕು ಬದುಕಲು ಬಿಡು ಎಂಬ ಮಾನವೀಯತೆಯ ಸಂದೇಶ ಸಾರಿದ ಜೈನ ಧರ್ಮದ 24ನೇ ತೀರ್ಥಂಕರ ಮಹಾವೀರ ಅವರ ತತ್ವಾದರ್ಶಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಶಾಸಕ ಹೆಚ್.ಪಿ. ಸ್ವರೂಪ್ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸೋಮವಾರ ನಡೆದ ಭಗವಾನ್ ಶ್ರೀ ಮಹಾವೀರ ಜಯಂತಿಯಲ್ಲಿ ಮಾತನಾಡಿದ ಅವರು, ಅಹಿಂಸೆ, ಸಹಾನುಭೂತಿ, ಶಾಂತಿ ಮತ್ತು ಸೌಹಾರ್ದತೆಯ ಮಹತ್ವವನ್ನು ಮಹಾವೀರ ಅವರು ಪ್ರತಿಪಾದಿಸಿದ್ದಾರೆ. ಜೈನ ಸಮುದಾಯ ಜಿಲ್ಲೆಯಲ್ಲಿ ಶಿಕ್ಷಣ, ಧರ್ಮ ಹಾಗು ಸಮಾಜಮುಖಿ ಕಾರ್ಯಗಳಲ್ಲಿ ವಿಶಿಷ್ಟ ಛಾಪು ಮೂಡಿಸಿದೆ. ಶ್ರವಣಬೆಳಗೊಳದ ವಿಶ್ವ ಪ್ರಸಿದ್ಧ ಗೋಮಟೇಶ್ವರ ಪ್ರತಿಮೆ ಮತ್ತು ಹಾಸನದ ಬಸದಿಗಳು ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು, ಜಿಲ್ಲೆಗೆ ಕೀರ್ತಿ ತಂದುಕೊಟ್ಟ ಮಹತ್ವದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕುರುಹು ಎಂದರು.

ತಮ್ಮ ತಂದೆ ನಗರಸಭೆ ಅಧ್ಯಕ್ಷರಾಗಿದ್ದಾಗ ಉಪಾಧ್ಯಕ್ಷರಾಗಿದ್ದ ಫಣಿರಾಜು ಅವರ ಕಾಲದಲ್ಲಿ ಜೈನ ಸಮುದಾಯದವರು ನಗರಾಭಿವೃದ್ಧಿಗೆ ನೀಡಿದ ಕೊಡುಗೆ ಅಪಾರ. ತಾವು ಕೂಡ ಶ್ರವಣಬೆಳಗೊಳ ಬಾಹುಬಲಿ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿ ಇಂಜಿನೀಯರಿಂಗ್ ಪದವಿ ಪಡೆದಿದ್ದನ್ನು ನೆನಪಿಸಿಕೊಂಡ ಸ್ವರೂಪ್, ಇದೀಗ ಜನರ ಆಶೀರ್ವಾದದಿಂದ ಶಾಸಕರಾಗಲು ಸಾಧ್ಯವಾಯಿತು ಎಂದು ಹೇಳಿದರು.

ತಮ್ಮ ತಂದೆ 4 ಬಾರಿ ಶಾಸಕರಾಗಲು ಜೈನ ಸಮುದಾಯದ ಬೆಂಬಲವೇ ಪ್ರಮುಖ ಕಾರಣ. ಆ ಆತ್ಮೀಯ ಸಂಬಂಧವನ್ನು ಮುಂದುವರಿಸುತ್ತೇವೆ. ಜೈನ ಸಮುದಾಯದವರು ಸದಾ ಶಾಂತಿ, ಸಹಿಷ್ಣುತೆ ಮತ್ತು ಮಾನವೀಯ ಮೌಲ್ಯಗಳನ್ನು ಪಾಲಿಸಿಕೊಂಡು ಬಂದಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಯಾರಿಗೂ ಹಾನಿ ಮಾಡದೆ, ಮಾನವೀಯ ಗುಣಗಳಿಂದ ಮನಸ್ಸುಗಳನ್ನು ಗೆಲ್ಲುವುದೇ ನಿಜವಾದ ಧರ್ಮ. ಪ್ರತಿಯೊಬ್ಬರೂ ಸಹನೆ, ಪ್ರೀತಿ ಮತ್ತು ಸಹಕಾರ ಮನೋಭಾವದಿಂದ ಬದುಕಿದರೆ ಸಮಾಜದಲ್ಲಿ ಶಾಂತಿ ಮತ್ತು ಏಕತೆ ಸಾಧ್ಯ ಎಂದರು.

ಕೇಂದ್ರೀಯ ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಚಂದ್ರಕಾಂತ್ ಪಡೆಸೂರು ಅವರು ಮಾತನಾಡಿ, ಜೈನ ಧರ್ಮ ಮತ್ತು ಅದರ ತತ್ವಶಾಸ್ತ್ರ ಅನಾದಿ ಕಾಲದಿಂದಲೂ ಹರಿದು ಬರುತ್ತಿರುವ ಪವಿತ್ರ ಆಧ್ಯಾತ್ಮಿಕ ಪರಂಪರೆಯಾಗಿದೆ. ಪ್ರತಿಯೊಂದು ಯುಗದಲ್ಲೂ ಧರ್ಮದ ಸ್ಥಾಪನೆ ಹಾಗು ಮಾನವ ಕುಲಕ್ಕೆ ಸತ್ಪಥದ ದಾರಿ ದೀಪವಾಗಲು ಒಂದರಿಂದ 24 ತೀರ್ಥಂಕರರು ಭೂಮಿಗೆ ಅವತರಿಸಿ ದೈವಿಕ ಸಂದೇಶ ಸಾರುತ್ತಾರೆಂಬ ನಂಬಿಕೆ ಜೈನ ಸಂಪ್ರದಾಯದಲ್ಲಿದೆ ಎಂದರು.

ಪ್ರಸ್ತುತ ಯುಗದಲ್ಲಿ ಪ್ರಥಮ ತೀರ್ಥಂಕರರಾದ ಭಗವಾನ್ ಶ್ರೀ ವೃಷಭದೇವರಿಂದ ಆರಂಭವಾಗಿ, 24ನೇ ಹಾಗು ಅಂತಿಮ ತೀರ್ಥಂಕರ ಭಗವಾನ್ ಮಹಾವೀರರ ಮೂಲಕ ಈ ಧಾರ್ಮಿಕ ಪರಂಪರೆ ಪೂರ್ಣತೆ ಕಂಡಿದೆ ಎಂದು ಹೇಳಿದರು.ಈ ಆಚರಣೆ ಕೇವಲ ಒಂದು ಹಬ್ಬ ವಾಗಿರದೇ, ಮಾನವೀಯ ಮೌಲ್ಯ ಗಳು, ಶಾಂತಿ, ಸಹಿಷ್ಣುತೆ ಮತ್ತು ಅಹಿಂಸೆಯ ಮಹತ್ವ ಸಾರುವ ಆಧ್ಯಾತ್ಮಿಕ ಸಂಭ್ರಮವಾಗಿಯೂ ಪರಿಗಣಿಸಲಾಗುತ್ತದೆಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಹೆಚ್.ಪಿ. ತಾರಾನಾಥ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಖಜಾಂಚಿ ಹೇಮಂತ್, ಜೈನ ಸಂಘದ ಅಧ್ಯಕ್ಷ ಹೆಚ್.ಶಾಂತೀಶ್, ಮಹಾವೀರ ಭವನದ ಅಧ್ಯಕ್ಷ ಹೆಚ್.ಡಿ.ನಾಗೇಂದ್ರಯ್ಯ, ತೇರಾಪಂತ್ ಸಭಾದ ಅಧ್ಯಕ್ಷ ಸೋಹನ್‌ಲಾಲ್, ಮೂರ್ತಿಪೂಜಕ್ ಜೈನ್ ಸಂಘದ ಅಧ್ಯಕ್ಷ ಅಮೃತಲಾಲ್ ಜೈನ್, ಕಮಲೇಶ್ ಮತ್ತಿತರರಿದ್ದರು.

## ಕುಲದೇವತೆ ಶ್ರೀ ಸಬ್ಬಮ್ಮ ದೇವಿ ಆಶೀರ್ವಾದ ಪಡೆದ ಸದಾನಂದಗೌಡ

» ಮೊದಲನೇ ಪುಟದಿಂದ

ರಾಜಕೀಯದಲ್ಲಿ ಉನ್ನತ ಸ್ಥಾನಗಳನ್ನು ಗಳಿಸಲು ಸಾಧ್ಯವಾಯಿತು. ಗೌಡರು ಮಾತ್ರವಲ್ಲದೆ ಎಲ್ಲಾ ಸಮುದಾಯದವರು ನಮ್ಮನ್ನು ಬೆಳೆಸಿದ್ದಾರೆ. ಈ ಎಲ್ಲದರ ಹಿಂದಿನ ಶಕ್ತಿಯೇ ದೇವರೆಂದು ಪ್ರತಿಪಾದಿಸಿದರು.

ಗಳಿಸಿರುವ ಆಸ್ತಿ ರಕ್ಷಿಸಿಕೊಳ್ಳುವ, ರಾಜಕಾರಣಿಗಳಿಗೆ ಅಧಿಕಾರ ಉಳಿಸಿಕೊಳ್ಳುವ ಅನಿವಾರ್ಯತೆ ಇರುತ್ತದೆ. ಅದಕ್ಕಾಗಿ ನಾವು ಆರಾಧ್ಯ ದೇವರ ಮೊರೆ ಹೋಗುತ್ತೇವೆ. ನಿತ್ಯ ನಾವು ದೇವರ ಪೂಜೆಯಲ್ಲಿ ಪಾಲ್ಗೊಂಡರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎಂದರು.

ಜವಾಬ್ದಾರಿ ಸಿಕ್ಕ ಸಂದರ್ಭದಲ್ಲಿ ಅದನ್ನು ಸಮರ್ಪಕವಾಗಿ ನಿರ್ವಹಿಸುವ ಸಂದರ್ಭದಲ್ಲಿ ಇನ್ನೊಬ್ಬರಲ್ಲಿ ದೇವರನ್ನು ಕಂಡರೆ ಅಂತಹ ವ್ಯಕ್ತಿ ಜೀವನದಲ್ಲಿ ಯಶಸ್ವಿಯಾಗುತ್ತಾನೆ. ಸುಳ್ಯ ತಾಲ್ಲೂಕಿನ ಮಂಡೆಕೋಲು ಎಂಬ ಕುಗ್ರಾಮದಲ್ಲಿ ಜನಿಸಿದ ನಾನು ರಾಜ್ಯದ ಮುಖ್ಯಮಂತ್ರಿ ಯಾಗಿ ಬೆಳೆದಿದ್ದೇನೆಂದರೆ ಅದಕ್ಕೆ ದೇವರ ಆಶೀರ್ವಾದ ಕಾರಣ. ಇದು ನನಗೆ ಸಿಕ್ಕ ಭಾಗ್ಯವೆಂದರು.

ಸಮಾಜದ ಕಾರ್ಯವನ್ನು ಅತ್ಯಂತ ಜವಾಬ್ದಾರಿಯಿಂದ ನಿಭಾಯಿಸಿದ್ದೇನೆ. ಮುಖ್ಯಮಂತ್ರಿ ಆಗಿದ್ದಾಗ ಅರೆಭಾಷಿಕ ಅಕಾಡೆಮಿ ಸ್ಥಾಪಿಸಿದ್ದೇನೆ. ನನಗೆ ಸಿಕ್ಕ ಅಧಿಕಾರದಲ್ಲಿ ಸಾಧ್ಯವಾದಷ್ಟು ಕೆಲಸ ಮಾಡಿದ್ದೇನೆ. ಮುಖ್ಯಮಂತ್ರಿ ಆಗಿದ್ದರೂ ಮೂಲ ದೇವರಿಗೆ ಬರಲು ಸಾಧ್ಯವಾಗಿರಲಿಲ್ಲ. ಈಗ ದೇವರೇ ಇಲ್ಲಿಗೆ ಕರೆಸಿಕೊಂಡಿದೆ ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು, ದೇವಾಲಯ ಆಡಳಿತ ಮಂಡಳಿ ಪದಾಧಿಕಾರಿಗಳು ಹಾಜರಿದ್ದರು.

## ಪೆನ್ಸಿಲ್ ಕೋರೆ ಹೆಸರಿನ ಕಾಡಾನೆಯಿಂದ ದಾಂಧಲೆ

» ಮೊದಲನೇ ಪುಟದಿಂದ

ತೋಟ ಮತ್ತಿತರ ಕಡೆಗಳಲ್ಲಿ ಕೆಲಸ ಮಾಡಲು ಕಾರ್ಮಿಕರು ಹೆದರುತ್ತಿದ್ದಾರೆ. ಹೆಚ್ಚು ಮಂದಿ ತೋಟ ಹಾಗು ಬೇರೆ ಬೇರೆ ಕಡೆ ಹೋಗಲು ಭಯ ಪಡುತ್ತಿದ್ದಾರೆ. ಕುಪ್ಪಗೋಡು ಗ್ರಾಮದ ಬಳಿ ಆನೆಗಳ ಸಂಚಾರ ಹೆಚ್ಚಾಗಿದ್ದು, ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಸ್ಥಳೀಯರಲ್ಲಿ ಮನೆ ಮಾಡಿರುವ ಆತಂಕ ದೂರ ಮಾಡ ಬೇಕೆಂದು ಒತ್ತಾಯಿಸಿದರು.

ಬೇಲೂರು ತಾಲ್ಲೂಕಿನ ಕೋಗೋಡು ಗ್ರಾಮದ ಬೇಡಿ ಎಸ್ಟೇಟ್, ಕಾನಹಳ್ಳಿ ಫಾರೆಸ್ಟ್ ಸಮೀಪ ಕಾನಹಳ್ಳಿ ಟಾಟಾ ಎಸ್ಟೇಟ್, ಕುಂಬ್ರಿ ಕಾಡು, ಕೊಗೋಡು, ಕುಪ್ಪಗೋಡು ಗ್ರಾಮದ ಹತ್ತಿರದ ಪುಟ್ಟಮ್ಮ ಅವರ ಕಾಡು, ಕಾನಳ್ಳಿ ಫಾರೆಸ್ಟ್ ಸುತ್ತಮುತ್ತ ಕಾಡಾನೆಗಳು ಕಳೆದ ಒಂದು ವಾರದಿಂದ ಬೀಡುಬಿಟ್ಟಿವೆ.

ಅದೇ ರೀತಿ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಮತ್ತು ಯಸಳೂರು ಹೋಬಳಿ ವ್ಯಾಪ್ತಿಯ ಹೊಂಗಡಹಳ್ಳ ಗ್ರಾಮದ ಕಾಡು ತೋಟ, ಮೇಕೀರಮನೆ ಗ್ರಾಮದ ಹಳೆಮನೆದಿನ್ನೆ ಕಾಡು, ಮತ್ತೂರು ಗ್ರಾಮದ ನೀಲಗಿರಿ ನಡು ತೋಪು, ಪಟ್ಲಾ ಗ್ರಾಮದ ದೊಡ್ಡ ಹಡ್ಲು, ಕಡ್ರಳ್ಳಿ ಗ್ರಾಮದ ಹೆಗ್ಲಿ ಬೆಟ್ಟ, ಐಗೂರು ಗ್ರಾಮದ ನಿರ್ಮಾ ಎಸ್ಟೇಟ್, ಬಾಚಿಹಳ್ಳಿ ಗ್ರಾಮದ ಕೆರೆದಿಣ್ಣೆ, ಜೇಡಿಗದ್ದೆ ಹಾಗು ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಬೈಸೂರು ಫಾರೆಸ್ಟ್ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿವೆ.

## ಆಧಾರವಿಲ್ಲದೆ ನನ್ನ ವಿರುದ್ಧ ಹನಿಟ್ರ್ಯಾಪ್ ಕೇಸ್: ನಾಗಲಕ್ಷ್ಮಿ

• ಪ್ರಜೋದಯ ವರದಿ

**ಹಾಸನ:** ಹಳೆಯ ದ್ವೇಷ ಹಾಗು ರಾಜಕೀಯ ಒತ್ತಡದಿಂದ ನನ್ನ ವಿರುದ್ಧ ಹನಿಟ್ರ್ಯಾಪ್ ಪ್ರಕರಣ ದಾಖಲಿಸಿ ಬಂಧನಕ್ಕೆ ಕಾರಣರಾದ ಹೊಳೆನರಸೀಪುರ ಪಿಎಸ್‌ಐ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ವಕೀಲೆ ಎಂ.ಆರ್.ನಾಗಲಕ್ಷ್ಮಿ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ವರ್ಷದ ಹಿಂದೆ ನಡೆದ ಪ್ರಕರಣವೊಂದರಲ್ಲಿ ನಾನು ಪಿಎಸ್‌ಐ ಅಭಿಜಿತ್ ಅವರ ಅಣತಿಯಂತೆ ಕೆಲಸ ಮಾಡದೇ ಇದ್ದರಿಂದ ದ್ವೇಷ ಸಾಧಿಸುತ್ತಿದ್ದರು. ಜೊತೆಗೆ ಕಾಂಗ್ರೆಸ್ ಮುಖಂಡರು ಸಹ ನನ್ನ ವಿರುದ್ಧ ಹಗೆತನ ಸಾಧಿಸಿದ್ದರು. ಈ ಒಂದು ಅವಕಾಶಕ್ಕಾಗಿ ಕಾದು ಜೈಲು ಪಾಲಾಗುವಂತೆ ಮಾಡಿದ್ದಾರೆಂದರು.

ಫೆ.13 ರಂದು ಹೊಳೆನರಸೀಪುರದ

ಮಹಿಳೆ ಮೇಲೆ ಕಾಂಗ್ರೆಸ್ ಮುಖಂಡ ರಂಗೇನಹಳ್ಳಿ ಮಹದೇವ ಎಂಬಾತ ಅತ್ಯಾಚಾರ ಎಸಗಿದ್ದ. ಆ ವಿಷಯವನ್ನು ಆಕೆಯ ಪತಿ ನನಗೆ ಹೇಳಿದಾಗ ಅತ್ಯಾಚಾರ ಪ್ರಕರಣ ದಾಖಲಿಸಲು ಸೂಚನೆ ನೀಡಿದೆ. ಲಿಖಿತ ದೂರನ್ನು ಬರೆದುಕೊಡುವಂತೆ ಮನವಿ ಮಾಡಿಕೊಂಡಿದ್ದರಿಂದ ಬರೆದುಕೊಟ್ಟಿದ್ದೆ. ಆದರೆ ನಗರ ಠಾಣೆ ಪೊಲೀಸರು, ಹಳೆಯ ದ್ವೇಷದಿಂದ ನನ್ನ ಮೇಲೆಯೇ ಸುಳ್ಳು ಎಫ್‌ಐಆರ್ ದಾಖಲಿಸಿ ಜೈಲಿಗೆ ಕಳುಹಿಸಿದರು ಎಂದರು.

ನಾನು ಹನಿಟ್ರ್ಯಾಪ್ ಮಾಡಿದ್ದರೆ ಪರಿಶೀಲನೆ ನಡೆಸಬೇಕಿತ್ತು. ಏಕಾಏಕಿ ಎಫ್‌ಐಆರ್ ದಾಖಲಿಸಿ ಯಾವುದೇ ನೋಟೀಸ್ ನೀಡದೆ ಮನೆಗೆ ಬಂದು ಬಂಧಿಸಿದರು. ಯಾವುದೇ ರೀತಿಯ ಹನಿಟ್ರ್ಯಾಪ್ ನಡೆದಿಲ್ಲ, ಅದು ಶುದ್ಧ ಸುಳ್ಳು ಎಂದ ಅವರು, ಈಗ ಆ ಮಹಿಳೆ ಎಲ್ಲಿದ್ದಾಳೆಂಬುದು ತಿಳಿದಿಲ್ಲ ಎಂದರು.

ಪ್ರಕರಣದ ಸಂಪೂರ್ಣ ತನಿಖೆ ನಡೆಸಬೇಕು. ರಾಜ್ಯದ ಜನರ ಹಿತ ದೃಷ್ಟಿಯೇ ಗೃಹ ಸಚಿವರ ಉದ್ದೇಶವಾಗಿದ್ದರೆ ಈ ಪ್ರಕರಣವನ್ನು ಉನ್ನತ ತನಿಖೆಗೆ ವಹಿಸಬೇಕು. ಇಲ್ಲವಾದರೆ ರಾಜೀನಾಮೆ ಕೊಡಬೇಕೆಂದು ಅಪದ್ಧ ಪದಗಳಲ್ಲಿ ನಿಂದಿಸಿದರು.

ನನಗೆ ಆಗಿರುವ ಅನ್ಯಾಯದ ವಿರುದ್ಧ ಕಾನೂನು ಹೋರಾಟ ಮಾಡುತ್ತೇನೆ. ಹೊಳೆನರಸೀಪುರ ಪಿಎಸ್‌ಐ ಅವರ ಬಂಡವಾಳ ಬಯಲು ಮಾಡುತ್ತೇನೆಂದು ಸವಾಲೆಸೆದರು. ಸುದ್ದಿಗೋಷ್ಠಿಯಲ್ಲಿ ಸಂತ್ರಸ್ತ ಮಹಿಳೆಯ ಪತಿ ಶಮಂತ್, ಅತ್ತೆಮೀನಾಕ್ಷಿ ಇದ್ದರು.

# ರೈತರ ಅಹೋರಾತ್ರಿ ಧರಣಿಗೆ ತಾತ್ಕಾಲಿಕ ತೆರೆ

## ಶಿಲುಬೆ ಬೆಟ್ಟದ ಗಣಿಗಾರಿಕೆ ಸ್ಥಗಿತ: ಅಪರ ಜಿಲ್ಲಾಧಿಕಾರಿ ಭರವಸೆ

• ಪ್ರಜೋದಯ ವರದಿ

**ಹಾಸನ:** ಆಲೂರು ತಾಲ್ಲೂಕಿನ ಹೊಸಮಠ ಗ್ರಾಮ ಸಮೀಪದ ಶಿಲುಬೆ ಬೆಟ್ಟದಲ್ಲಿ ನಡೆಯುತ್ತಿದ್ದ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಆಗ್ರಹಿಸಿ ಕಳೆದ ಐದು ದಿನಗಳಿಂದ ಜಿಲ್ಲಾಧಿಕಾರಿ ಕಚೇರಿ ಎದುರು ರೈತರು ಹಾಗು ಗ್ರಾಮಸ್ಥರು ನಡೆಸುತ್ತಿದ್ದ ಅಹೋರಾತ್ರಿ ಧರಣಿ ಸೋಮವಾರ ತಾತ್ಕಾಲಿಕ ಅಂತ್ಯಕಂಡಿದೆ.

ಪ್ರತಿಭಟನಾ ಸ್ಥಳಕ್ಕೆ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರು ಆಗಮಿಸಿ, ಗಣಿಗಾರಿಕೆಯ ಸ್ಥಳ ಪರಿಶೀಲನೆ ಪೂರ್ಣಗೊಳ್ಳುವವರೆಗೆ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾ ಗಿದೆ ಹಾಗು ಇತರೆ ಬೇಡಿಕೆಗಳನ್ನು 15 ದಿನಗಳೊಳಗೆ ಈಡೇರಿಸುವ ಭರವಸೆ ನೀಡಿದ ಹಿನ್ನಲೆ ಹೋರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಈ ವೇಳೆ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಜಗದೀಶ್ ಗಂಗಣ್ಣನವರ್, ಗಣಿಗಾರಿಕೆ ಚಟುವಟಿಕೆಗಳಿಂದ ಸ್ಥಳೀಯರಿಗೆ ಉಂಟಾಗುತ್ತಿರುವ ತೊಂದರೆಗಳ ಕುರಿತು ಬಂದ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲಾಧಿಕಾರಿ ನಿರ್ದೇಶನದಂತೆ ಪರಿಶೀಲನಾ ಸಮಿತಿ ರಚಿಸಲಾಗಿದೆ. ಸಮಿತಿ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವವರೆಗೆ ಗಣಿಗಾರಿಕೆ ಚಟುವಟಿಕೆ ಗಳನ್ನು ನಿಲ್ಲಿಸುವಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸೂಚನೆ ನೀಡಲಾಗಿದೆಂದು ಹೇಳಿದರು.

ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸೇರಿ ಮೂಲಭೂತ ಸೌಲಭ್ಯಗಳ ಕೊರತೆ ಕುರಿತು ಅನೇಕ ದೂರುಗಳು ಬಂದಿದ್ದು, ಸಂಬಂಧಿಸಿದ ಜಮೀನು ಸರ್ಕಾರಿ ಅಥವಾ ಖಾಸಗಿಯದ್ದೇ ಎಂಬುದನ್ನು ಸರ್ವೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಸಂಬಂಧಿತ ಇಲಾಖೆಗಳೊಂದಿಗೆ ಚರ್ಚೆ ನಡೆಸಲಾಗುವುದೆಂದು ಭರವಸೆ ನೀಡಿದರು.

ಹಾಸನ ನಗರದ ರಾಘವೇಂದ್ರ ಕಾಲೋನಿ ಹಾಗು ಬೀರನಹಳ್ಳಿ ಕೆರೆ ಪ್ರದೇಶದ ಹಕ್ಕುಪತ್ರ ಸಮಸ್ಯೆಯನ್ನು ಜಿಲ್ಲಾಮಟ್ಟದ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ಅಗತ್ಯವಿದ್ದಲ್ಲಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಈ ಎಲ್ಲಾ ವಿಚಾರಗಳನ್ನು ಹೋರಾಟಗಾರರಿಗೆ ಮನವರಿಕೆ ಮಾಡಿಕೊಡಲಾಗಿದ್ದು, ತಾತ್ಕಾಲಿಕ ಒಪ್ಪಿಗೆ ಸೂಚಿಸಿದ್ದಾರೆ ಎಂದರು.

ರೈತ ಸಂಘದ ಅಧ್ಯಕ್ಷ ಬಾಬು ಅವರು ಮಾತನಾಡಿ, ಅಧಿಕಾರಿಗಳ ಭರವಸೆ ಹಿನ್ನಲೆ ಶಿಲುಬೆ ಬೆಟ್ಟ ಗಣಿಗಾರಿಕೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಕುಡಿಯುವ ನೀರಿನ ಸಮಸ್ಯೆ, ಹಾಗು ರಾಘವೇಂದ್ರ ಕಾಲೋನಿ ಸಮಸ್ಯೆ ಪರಿಹಾರಕ್ಕೆ 15 ದಿನಗಳ ಕಾಲಾವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ಸ್ಪಷ್ಟ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಹಮ್ಮಿಕೊಳ್ಳ ಲಾಗುವುದೆಂದು ಎಚ್ಚರಿಸಿದರು.

ಈ ವೇಳೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ರೈತ ಗಂಗಾಧರ್ ಮಾತನಾಡಿ, 2007ರ ಮೇ 11 ರಂದು ಯಾವುದೇ ನೋಟೀಸ್ ನೀಡದೇ ರಾಘವೇಂದ್ರ ಕಾಲೋನಿಯ ಬೀರನಹಳ್ಳಿ ಕೆರೆ ಪ್ರದೇಶದಲ್ಲಿ 25 ವರ್ಷಗಳಿಂದ ವಾಸವಾಗಿದ್ದ 75 ಕುಟುಂಬಗಳನ್ನು ಏಕಾಏಕಿ ತೆರವುಗೊಳಿಸಲಾ ಗಿತ್ತು. ಆ ಘಟನೆ ಯುದ್ಧದಂತಿತ್ತು ಎಂದು ಬೇಸರ ವ್ಯಕ್ತಪಡಿಸಿದ ಅವರು, ಪರ್ಯಾಯವಾಗಿ ಕೃಷ್ಣನಗರದಲ್ಲಿ ಮನೆಗಳನ್ನು ನೀಡುವುದಾಗಿ ಹೇಳಿದ್ದರೂ ಇಂದಿಗೂ ನ್ಯಾಯ ಸಿಕ್ಕಿಲ್ಲ ಎಂದು ದೂರಿದರು. ರೈತ ಸಂಘದ ರಾಜ್ಯ ಸಂಚಾಲಕ ಮಹಮ್ಮದ್ ಸಾದಿಕ್, ವಿಠಲ್, ವೆಂಕಟೇಶ್, ಸಮೀವುಲ್ಲಾ, ಅರುಣ ಭಾಸ್ಕರ್, ಪವಿತ್ರ, ರಂಗಮ್ಮ, ಕವಿತ ಇದ್ದರು.

## ದೇವಾಲಯ ಬಾಗಿಲು ಮುರಿದು ಕಳ್ಳತನ

• ಪ್ರಜೋದಯ ವರದಿ

**ಅರಸೀಕೆರೆ:** ದೇವಾಲಯ ಬಾಗಿಲು ಮುರಿದಿರುವ ಕಳ್ಳರು ಹುಂಡಿ ಹಣ ಸೇರಿ 13 ಲಕ್ಷ ರೂ. ಮೌಲ್ಯದ ಬೆಳ್ಳಿ ಆಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಹೊನ್ನೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶ್ರೀ ಚಿತ್ರಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿರುವ ಕರಿಯಮ್ಮ ಮತ್ತು ಬೀದಿ ಮಾರಮ್ಮ ದೇವರಿಗೆ ಹಾಕಿದ್ದ ಆಭರಣ ಕಳವು ಮಾಡಲಾಗಿದೆ. ಮಾ.28ರ ರಾತ್ರಿ ಬಂದಿರುವ ಕಳ್ಳರು ಬೀಗ ಮುರಿದು 10 ಗ್ರಾಂ ತೂಕದ ಚಿನ್ನ ಮಿಶ್ರಿತ 2 ಬೆಳ್ಳಿ ತಾಳಿ, 3 ಕೆ.ಜಿ. ತೂಕದ 15 ಬೆಳ್ಳಿ ಛತ್ರಿ, 1 ಕೆ.ಜಿ. ತೂಕದ 6 ಬೆಳ್ಳಿ ನಾಗಾಭರಣ, 1 ಕೆ.ಜಿ ತೂಕದ ದೇವರ ಬೆಳ್ಳಿಯ ಪಾದುಕೆ, ಬೀರುವಿನಲ್ಲಿಟ್ಟಿದ್ದ 2 ಕೆ.ಜಿ. ಬೆಳ್ಳಿ ಒಡವೆ, ಹುಂಡಿಯಲ್ಲಿದ್ದ ಅಂದಾಜು 2.50 ಲಕ್ಷ ರೂ. ಸೇರಿ ಇನ್ನೂ ಅನೇಕ ಬಗೆಯ ಬೆಳ್ಳಿ ಆಭರಣ ಕದ್ದಿದ್ದಾರೆ. ಒಟ್ಟು 17 ಕೆ.ಜಿ. 750 ಗ್ರಾಂ ತೂಕದ ಬೆಳ್ಳಿಯ ಆಭರಣ ಹಾಗು 35 ಗ್ರಾಂ ತೂಕದ ಚಿನ್ನದ ಆಭರಣ ಕಳ್ಳತನವಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನವಿಲೆ ನಾಗೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಪುರಾಣ ಪ್ರಸಿದ್ಧ ನವಿಲೆ ಗ್ರಾಮದ ಶ್ರೀ ನಾಗೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ ಸೋಮವಾರ ವಿಜೃಂಭಣೆಯಿಂದ ನೆರವೇರಿತು.

ಶ್ರೀ ನಾಗೇಶ್ವರ ಸ್ವಾಮಿಗೆ ಬೆಳಿಗ್ಗೆಯಿಂದ ವಿಶೇಷ ಪೂಜೆ, ಅಭಿಷೇಕ, ಹೂವಿನ ಅಲಂಕಾರ ಸೇರಿ ವಿವಿಧ ಪೂಜೆಗಳು ನೆರವೇರಿದವು.

ಬೆಂಗಳೂರು, ತಿಪಟೂರು, ಚನ್ನರಾಯಪಟ್ಟಣ ಸೇರಿ ರಾಜ್ಯದ ನಾನಾ ಭಾಗಗಳಿಂದ ಭಕ್ತರು ಆಗಮಿಸಿ ರಥೋತ್ಸವದಲ್ಲಿ ಪಾಲ್ಗೊಂಡರು. ಸಂಪ್ರದಾಯದಂತೆ ಗ್ರಾಮದ ರಾಜಬೀದಿಗಳಲ್ಲಿ ದೇವರ ಹಾಗು ಬಸವಣ್ಣನ ಉತ್ಸವದೊಂದಿಗೆ ಮೂಲ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದ ನಂತರ ಗ್ರಾಮದ ರಥದಬೀದಿಗೆ ಉತ್ಸವದೊಂದಿಗೆ ಬರಲಾಯಿತು. ಮಹಾಮಂಗಳಾರತಿ ನೆರವೇರಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಹಣ್ಣು ದವನ ಎಸೆದು ಭಕ್ತರು ಪ್ರಾರ್ಥಿಸಿದರು.

**ಗಮನ ಸೆಳೆದ ನಂದಿ ಧ್ವಜ ಕುಣಿತ**

ಶ್ರೀ ನಾಗೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ ಅಂಗವಾಗಿ ನಂದಿ ಧ್ವಜ ಕುಣಿತ ಗಮನ ಸೆಳೆಯಿತು. ರಥೋತ್ಸವಕ್ಕೂ ಮೊದಲು ನಂದಿ ಧ್ವಜ ಕುಣಿತದೊಂದಿಗೆ ದೇವರ ಉತ್ಸವ ನಡೆಸಲಾಯಿತು. ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ.ಸಿ.ಆನಂದ್ ಕುಮಾರ್, ಡಿವೈಎಸ್ಪಿ ಕುಮಾರ್, ತಹಶೀಲ್ದಾರ್ ಶಂಕರಪ್ಪ, ಪಿಎಸ್‌ಐ ಭರತ್ ರೆಡ್ಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಎನ್.ಪರಮೇಶ್, ತಾಲ್ಲೂಕು ಅರ್ಚಕರ ಸಂಘದ ಅಧ್ಯಕ್ಷ ಶ್ರೀಧರ್ ಮೂರ್ತಿ, ನವಿಲೆ ನಾಗೇಶ್ವರ ಸ್ವಾಮಿ ನೀರು ಬಳಕೆದಾರರ ಸಂಘದ ಅಧ್ಯಕ್ಷ ಇಟ್ಟಿಗೆ ನಾಗರಾಜ್, ರಥ ನಿರ್ಮಾಣ ಸಮಿತಿ ಅಧ್ಯಕ್ಷ ಸದಾಶಿವಯ್ಯ ಇತರರಿದ್ದರು.

## ಇರಾನ್ ಸಂಪನ್ಮೂಲ ಸ್ಫೋಟಿಸುವ ಎಚ್ಚರಿಕೆ

» ಮೊದಲನೇ ಪುಟದಿಂದ

ಅಮೇರಿಕಾದ ಮತ್ತೊಂದು ಗುರಿ ಎಂದು ಹೇಳಲಾಗುತ್ತಿದೆ.

**ಭಾರತದ ಹಾರ್ಮುಜ್ ರಾಜತಾಂತ್ರಿಕತೆ ಯಶಸ್ವಿ**

ಭಾರತದ ಹಾರ್ಮುಜ್ ರಾಜತಾಂತ್ರಿಕತೆಗೆ ಯಶಸ್ಸು ಸಿಕ್ಕಿದ್ದು, ಹಡಗುಗಳು ಜಲಸಂಧಿಯನ್ನು ದಾಟಿ ಸುರಕ್ಷಿತವಾಗಿ ಸ್ವದೇಶಕ್ಕೆ ಮರಳುತ್ತಿವೆ. ಈ ಕುರಿತು ಮಾಹಿತಿ ನೀಡಿರುವ ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ, ಭಾರತವು ನಿರಂತರ ಕಡಲ ಕಾರ್ಯಾಚರಣೆಗಳು ಮತ್ತು ಇಂಧನ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದನ್ನು ಮುಂದುವರೆಸಿದೆ ಎಂದು ಹೇಳಿದ್ದಾರೆ.

ಪ್ರಸ್ತುತ 485 ನಾವಿಕರೊಂದಿಗೆ 18 ಭಾರತೀಯ ಹಡಗುಗಳು ಪರ್ಷಿಯನ್ ಕೊಲ್ಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವೆಲ್ಲವೂ ಸುರಕ್ಷಿತವಾಗಿವೆ. ಕಳೆದ 24 ಗಂಟೆಗಳಲ್ಲಿ ಯಾವುದೇ ಸಮುದ್ರ ಅಪಘಾತಗಳು ವರದಿಯಾಗಿಲ್ಲ. ಒಟ್ಟು 94,000 ಮೆಟ್ರಿಕ್ ಟನ್ ಸಾಮರ್ಥ್ಯದ 2 ಎಲ್‌ಪಿಜಿ ವಾಹಕಗಳು ಹಾರ್ಮುಜ್ ಜಲಸಂಧಿಯನ್ನು ದಾಟಿ ಈಗ ಭಾರತಕ್ಕೆ ಬರುತ್ತಿವೆಂದುಮಾಹಿತಿ ನೀಡಿದ್ದಾರೆ.

## ಚನ್ನಕೇಶವ ಸ್ವಾಮಿ ರಥೋತ್ಸವ ವೇಳೆ ಕುರಾನ್ ಪ್ರಾರ್ಥನೆ ಬೇಡ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಬೇಲೂರಿನಲ್ಲಿ ನಡೆಯಲಿರುವ ಚನ್ನಕೇಶವ ಸ್ವಾಮಿ ಬ್ರಹ್ಮ ರಥೋತ್ಸವ ವೇಳೆ ಮುಸ್ಲಿಂ ಖಾಜಿಯವರು ಕುರಾನ್ ಪ್ರಾರ್ಥನೆ ಮಾಡುವುದನ್ನು ನಿಷೇಧಿಸಬೇಕೆಂದು ಹಿಂದೂ ದೇವಾಲಯ ಗಳ ಅರ್ಚಕರ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ಎಂ.ಎಸ್. ವಿಶ್ವನಾಥ್ ದೀಕ್ಷಿತ್ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿರುವ ಶ್ರೀ ಚನ್ನಕೇಶವ ದೇವಾಲಯದಲ್ಲಿ ನಡೆಯುವ ರಥೋತ್ಸವವು ಶಾಂತಿ, ಸೌಹಾರ್ದದ ಸಂಕೇತವಾಗಿದೆ ಎಂದರು.

ರಥೋತ್ಸವದಲ್ಲಿ ಖಾಜಿಯವರು ಬಂದು ಪ್ರಾರ್ಥನೆ ಮಾಡುವುದರ ಬಗ್ಗೆ ಹಿಂದೂ ಧಾರ್ಮಿಕ ಇಲಾಖೆಯ ನಿಯಮಾವಳಿಯಲ್ಲಿಯೂ ಉಲ್ಲೇಖವಿಲ್ಲ. ಆದರೆ ಕೆಲ ವರ್ಷಗಳ ಹಿಂದೆ ಯಾರೋ ಒಬ್ಬರ ಹಿತಾ ಸಕ್ತಿಗಾಗಿ ಖಾಜಿಯವರು ರಥದ ಮುಂದೆ ನಿಂತು ಕುರಾನ್ ಪಠಣ ಮಾಡಿದ್ದರಿಂದ ಆ ಪದ್ಧತಿ ಮುಂದುವರಿದು ಕೊಂಡು ಬಂದಿದೆ. ನಿಯಮ ಮೀರಿ ಮಾಡುತ್ತಿರುವ ಈ ಪ್ರಕ್ರಿ ಯೆಗಳು ನಿಲ್ಲಬೇಕು. ಹಿಂದೂ ಭಾವನೆ ಗಳಿಗೆ ಮನ್ನಣೆ ನೀಡಬೇಕು. ಕುರಾನ್ ಪಠಣಕ್ಕೆ ಅವಕಾಶ ಕೊಟ್ಟು ಹಿಂದೂ ಧರ್ಮಕ್ಕೆ ಹಾಗು ಚನ್ನಕೇಶವ ಸ್ವಾಮಿ ಭಕ್ತರಿಗೆ ಧಕ್ಕೆ ಉಂಟು ಮಾಡುವ ಕೆಲಸ ಮಾಡಬಾರದು. ಅದಕ್ಕೆ ಸಂಪೂರ್ಣ ಹೊಣೆ ಜಿಲ್ಲಾಡಳಿತ ಹಾಗು ತಾಲ್ಲೂಕು ಆಡಳಿತದ್ದಾಗಿದ್ದು, ಯಾವುದೇ ರೀತಿಯ ಪಠಣಕ್ಕೆ ಅವಕಾಶ ನೀಡಬಾರದೆಂದು ಮನವಿ ಮಾಡಿದರು.

ರಥೋತ್ಸವದಲ್ಲಿ ಕುರಾನ್ ಪಠಣ ಅಥವಾ ಪ್ರಾರ್ಥನೆ ಸಲ್ಲಿಸುವುದು ಕೋಟ್ಯಾಂತರ ಹಿಂದೂಗಳ ಭಾವನೆಗಳಿಗೆ ಧಕ್ಕೆ ಉಂಟಾಗುತ್ತಿದೆ. ವಿವಾದ ಇದೆ ಎಂದು ಅರಿತಿದ್ದರೂ ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ಕಳೆದ ಬಾರಿಯ ರಥೋತ್ಸವದಲ್ಲಿ ದೇವಸ್ಥಾನದ ಒಳಗಿನ ಆವರಣದಲ್ಲಿ ಪ್ರಾರ್ಥನೆ ಮಾಡಲು ಅವಕಾಶ ನೀಡಿ ರುವುದು ಖಂಡನೀಯ. ನಿಯಮ ಮೀರಿ ಪ್ರಾರ್ಥನೆ ಅಥವಾ ಕುರಾನ್ ಪಠಣಕ್ಕೆ ಅವಕಾಶ ನೀಡದೆ, ವಿಚಾರವನ್ನು ಸೂಕ್ಷ್ಮವಾಗಿ ಗ್ರಹಿಸಿ ಹಿಂದುಗಳ ಪರವಾಗಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಿದರು. ಹಿಂದೂ ಅರ್ಚಕರ ಒಕ್ಕೂಟದ ಗೌರವಾಧ್ಯಕ್ಷ ವೆಂಕಟೇಶ್, ತಾಲ್ಲೂಕು ಉಪಾಧ್ಯಕ್ಷ ವಿಜಯ ಕುಮಾರ್, ಕಾರ್ಯದರ್ಶಿ ಸೀತಾರಾಮ್, ಮಹೇಶ್‌ದತ್ತ ಇದ್ದರು.

# ಎ.2ರಿಂದ 6ರ ವರೆಗೆ ವಿಶೇಷ ರೈಲು ಸಂಚಾರ

• ಪ್ರಜೋದಯ ವರದಿ

**ಹಾಸನ:** ಗುಡ್‌ಫ್ರೈಡೆ, ಈಸ್ಟರ್ ಹಬ್ಬದ ಪ್ರಯುಕ್ತ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ಕಡಿಮೆ ಮಾಡಲು ನೈರುತ್ಯ ರೈಲ್ವೆಯು ಯಶವಂತಪುರ, ಮಡಗಾಂವ್ ಮತ್ತು ಬೆಂಗಳೂರು ಕಂಟೋನ್ಮೆಂಟ್ ನಡುವೆ ವಿಶೇಷ ರೈಲುಗಳನ್ನು ಓಡಿಸಲು ನಿರ್ಧರಿಸಿದೆ ಎಂದು ಮೈಸೂರು ವಿಭಾಗದ ಹಿರಿಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ ಧರ್ಮರಾಜ ಕಲಗೊಂಡ ಅವರು ತಿಳಿಸಿದ್ದಾರೆ.

ಈ ವಿಶೇಷ ರೈಲುಗಳು ಮಾರ್ಗ ಮಧ್ಯೆ ಕುಣಿಗಲ್, ಚನ್ನರಾಯಪಟ್ಟಣ, ಹಾಸನ, ಸಕಲೇಶ ಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಬಂಟ್ವಾಳ, ಸುರತ್ಕಲ್, ಮೂಲ್ಕಿ, ಉಡುಪಿ, ಬಾರ್ಕೂರು, ಕುಂದಾಪುರ, ಬೈಂದೂರು, ಭಟ್ಕಳ, ಮುರುಡೇಶ್ವರ, ಹೊನ್ನಾವರ, ಕುಮಟಾ, ಗೋಕರ್ಣ ರೋಡ್, ಅಂಕೋಲಾ, ಕಾರವಾರ ಮತ್ತು ಕಾಣಕೋಣ ನಿಲ್ದಾಣಗಳಲ್ಲಿ ನಿಲ್ಲಲಿವೆ.

ರೈಲು ಸಂಖ್ಯೆ 06271 ಯಶವಂತಪುರ-ಮಡಗಾಂವ್ ವಿಶೇಷ ಎಕ್ಸ್‌ಪ್ರೆಸ್ ಎ.2ರಂದು ರಾತ್ರಿ 11.55ಕ್ಕೆ ಯಶವಂತಪುರದಿಂದ ಹೊರಟು, ಎ.3ರಂದು ಸಂಜೆ 5.30ಕ್ಕೆ ಮಡಗಾಂವ್ ತಲುಪಲಿದೆ. ಹಿಂದಿರುಗುವ ಪ್ರಯಾಣದಲ್ಲಿ ರೈಲು ಸಂಖ್ಯೆ 06272 ಮಡಗಾಂವ್- ಬೆಂಗಳೂರು ಕಂಟೋನ್ಮೆಂಟ್ ವಿಶೇಷ ಎಕ್ಸ್‌ಪ್ರೆಸ್ ಎ.5ರಂದು ಬೆಳಿಗ್ಗೆ 11ಕ್ಕೆ ಮಡಗಾಂವ್‌ನಿಂದ ಹೊರಟು ಎ.6ರಂದು ಬೆಳಗಿನ ಜಾವ 5.20ಕ್ಕೆ ಬೆಂಗಳೂರು ಕಂಟೋನ್ಮೆಂಟ್ ತಲುಪಲಿದೆ.

ಹಿಂದಿರುಗುವ ಪ್ರಯಾಣದಲ್ಲಿ ರೈಲು ಸಂಖ್ಯೆ 06272 ಯಶವಂತಪುರ ನಿಲ್ದಾಣದಲ್ಲಿ ನಿಲುಗಡೆ ಇರುವುದಿಲ್ಲ. ಎಂವಿಟಿ ಬೆಂಗಳೂರು ನಿಲ್ದಾಣದಲ್ಲಿ ರೈಲು ನಿಲ್ಲಲಿದೆ. ಈ ವಿಶೇಷ ರೈಲು ಒಟ್ಟು 19 ಬೋಗಿಗಳನ್ನು ಹೊಂದಿರಲಿದೆ. ಅದರಲ್ಲಿ 2 ಎಸಿ 2-ಟೈರ್, ಎರಡು ಎಸಿ 3-ಟೈರ್, 9 ಸ್ಲೀಪರ್ ಕ್ಲಾಸ್, 4 ಸಾಮಾನ್ಯ ದ್ವಿತೀಯ ದರ್ಜೆ ಹಾಗು 2 ಎರ್/ಡಿ ಬೋಗಿಗಳು ಇರಲಿವೆ ಎಂದು ಮಾಹಿತಿ ನೀಡಿದ್ದಾರೆ.

## ಅಸಮರ್ಪಕ ವಿದ್ಯುತ್ ಖಂಡಿಸಿ ನಾಳೆ ಹಳೇಬೀಡಿನಲ್ಲಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಎ.1ರಂದು ಹಳೇಬೀಡಿನ ಸೆಸ್ಕಾಂ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ರಂದು ಆರ್‌ಪಿಐ ರಾಜ್ಯಾಧ್ಯಕ್ಷ ಸತೀಶ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಬೇಸಿಗೆ ಆರಂಭವಾಗಿರು ವುದರಿಂದ ಬೆಳೆಗಳು ಒಣಗುತ್ತಿವೆ. ಸಾಲ ಸೋಲ ಮಾಡಿ ಕೈಗೊಂಡಿರುವ ಕೃಷಿ ಕೈಹಿಡಿಯ ಬೇಕೆಂದರೆ ನೀರುಣಿಸುವ ಅಗತ್ಯತೆ ಹೆಚ್ಚಿದೆ. ಸೆಸ್ಕಾಂ ಅಧಿಕಾರಿಗಳು ಇಲ್ಲಸಲ್ಲದ ನೆಪವೊಡ್ಡಿ ವಿದ್ಯುತ್ ಕಡಿತ ಮಾಡುತ್ತಿದ್ದಾರೆಂದರು.

ಎ.1ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಹಳೇಬೀಡಿನ ಹೊಯ್ಸಳ ವೃತ್ತದಿಂದ ಸೆಸ್ಕಾಂ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು. ಹಳೇಬೀಡು ಹೋಬಳಿ ಗಂಗೂರು ಎಂಯುಎಸ್‌ಎಸ್ ಘಟಕದ ವ್ಯಾಪ್ತಿಯ ರೈತರಿಗೆ ಸಮರ್ಪಕ ವಿದ್ಯುತ್ ಕೊಡದೆ ಪ್ರತಿದಿನ ಕೇವಲ 2-3 ಗಂಟೆ ಕರೆಂಟ್ ಕೊಡುವುದರಿಂದ ರೈತರಿಗೆ ತೊಂದರೆ ಆಗುತ್ತಿದೆ. ಒಂದೇ ಒಂದು ಕೊಳವೆ ಬಾವಿಗೂ ವಿದ್ಯುತ್ ನೀಡುತ್ತಿಲ್ಲ. ಸಮಸ್ಯೆ ಸರಿಯಾಗಲು ಹೆಚ್ಚುವರಿ ಟ್ರಾನ್ಸ್ ಫಾರ್ಮರ್‌ಗೆ ಪ್ರಸ್ತಾವನೆ ಕಳುಹಿಸಿ ಎಂದರೆ ಅದನ್ನು ಅಧಿಕಾರಿ ಮಾಡುತ್ತಿಲ್ಲವೆಂದು ದೂರಿದರು.

ರಾಜ್ಯ ಸರ್ಕಾರ ತ್ರಿ ಫೇಸ್ ವಿದ್ಯುತ್ ನೀಡಬೇಕೆಂದು ಘೋಷಣೆ ಮಾಡಿದ್ದರೂ, ಅಧಿಕಾರಿ ಗಳು ಅದನ್ನು ಕಾರ್ಯಗತ ಮಾಡುತ್ತಿಲ್ಲ. ಈ ಬಗ್ಗೆ ಕೇಳಿದರೆ ಜೆಇ ಮತ್ತು ಎಇ ಸ್ಪಂದಿಸದೆ ಉಡಾಫೆ ಉತ್ತರ ನೀಡುತ್ತಾರೆ. ದಲಿತ ಅಧಿಕಾರಿ ಆಗಿರುವ ಇಂಜಿನೀಯರ್ ರೈತರಿಗೆ ಪೂರಕ ವಾದ ಕೆಲಸ ಮಾಡುವುದನ್ನು ಬಿಟ್ಟು ಬೇಡವಾದ ತಪ್ಪುಗಳನ್ನು ಹುಡುಕುತ್ತಾರೆ. ಹಳೇಬೀಡು ಹೋಬಳಿಯಲ್ಲಿ ದಲಿತರು ಒಂದೇ ಒಂದು ಅಕ್ರಮ ಸಂಪರ್ಕ ಹೊಂದಿಲ್ಲ ಎಂದು ಸ್ಪಷ್ಟಪಡಿಸಿದರು. ಅಂಬೇಡ್ಕರ್ ಸಂಘದ ಅಧ್ಯಕ್ಷ ಮಹೇಶ್ ಗಂಗೂರು, ರೈತ ಮುಖಂಡ ಮೂಡಲ ಗಿರಿಗೌಡ, ದಲಿತ ಮುಖಂಡ ರತೀಶ್ ಅಪ್ಪಗೌಡನಹಳ್ಳಿ, ದಸಂಸ ಜಿಲ್ಲಾ ಸಂಚಾಲಕ ಲಿಂಗರಾಜು ಹಳೇಬೀಡು, ಜಿ.ಆರ್.ರಂಗಸ್ವಾಮಿ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019